# ಮಾಧ್ಯಮ ಮಂಗಳ

ಸಂಚಿಕೆ:02 ಸಂಪುಟ:11 ಮಂಗಳೂರು ವಿಶ್ವವಿದ್ಯಾನಿಲಯ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ ದಿನಾಂಕ: ಸೆಪ್ಟೆಂಬರ್ 28, 2015





ರಾಜಕೀಯ ಸ್ವಾರ್ಥಕ್ಕೆ ಬಲಿಯಾದ ನೇತ್ರಾವತಿ

ಪುಟ 2





ಸೊರಗುತ್ತಿರುವ ತುಳುನಾಡ ಪೊರ್ಲುದ ಆಟ

ಪುಟ 3






"ನಾನು ಅವನಲ್ಲ ಅವಳು" ಚಿತ್ರ ವಿಮರ್ಶೆ

ಪುಟ 4


## "ಸ್ನಾತಕೋತ್ತರದವರೆಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಅಗತ್ಯ"

### ಮಂಗಳೂರು ವಿವಿ ಸಂಸ್ಥಾಪನಾ ದಿನಾಚರಣೆಯಲ್ಲಿ ರಾಜ್ಯಪಾಲ ವಜುಭಾಯಿ ವಾಲಾ ಅಭಿಮತ

**ಮಂಗಳಗಂಗೋತ್ರಿ:** ಜನಸಾಮಾನ್ಯನಿಗೂ ಮೌಲ್ಯಯುತ ಮತ್ತು ಗುಣಮಟ್ಟದ ಶಿಕ್ಷಣ ಸಿಗುವಂತಾಗಲು ಎಲ್ಲರಿಗೂ ಪ್ರಾಥಮಿಕ ಶಿಕ್ಷಣದಿಂದ ಸ್ನಾತ್ತಕೋತ್ತರ ಶಿಕ್ಷಣದವರೆಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಸರ್ಕಾರ ಯೋಜನೆ ರೂಪಿಸಬೇಕು ಎಂದು ರಾಜ್ಯಪಾಲ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಕುಲಾಧಿಪತಿ ವಜುಭಾಯಿ ರೂಢಾಭಾಯಿ ವಾಲಾ ಅಭಿಪ್ರಾಯಪಟ್ಟರು.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳ ಸಭಾಂಗಣದಲ್ಲಿ ಇತ್ತೀಚೆಗೆ 36ನೇ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿದ ಬಳಿಕ ವಿವಿಯ "ವಿಷನ್ 2030" ವರದಿ ಬಿಡುಗಡೆಗೊಳಿಸಿ ಮಾತನಾಡಿದರು.

ಆರೋಗ್ಯ ಮತ್ತು ಶಿಕ್ಷಣ ಆದ್ಯತೆಯ ಕ್ಷೇತ್ರಗಳಾಗಬೇಕು. ಅದರಲ್ಲೂ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು. ಎಲ್ಲರಿಗೂ ಶಿಕ್ಷಣ ದೊರೆಯಬೇಕು ಎಂಬ ಸದುದ್ದೇಶದಿಂದ ಕಡ್ಡಾಯ ಮತ್ತು ಉಚಿತ ಪ್ರಾಥಮಿಕ ಶಿಕ್ಷಣವನ್ನು ಸಂವಿಧಾನದಲ್ಲಿ ಅಳವಡಿಸಲಾಯಿತು. ಇದರ ಪೂರ್ಣ ಆಶಯ ಇಂದಿಗೂ ಸಾಕಾರಗೊಂಡಿಲ್ಲ. ಪ್ರಸಕ್ತ ಕಾಲಘಟ್ಟದಲ್ಲಿ ಪ್ರಾಥಮಿಕ ಶಿಕ್ಷಣ ಸಾಕಾಗುವುದಿಲ್ಲ. ಉನ್ನತ ಶಿಕ್ಷಣ ಪಡೆಯುವುದು ಅಗತ್ಯ. ಪ್ರಸ್ತುತ ಉನ್ನತ ಶಿಕ್ಷಣ ಜನಸಾಮಾನ್ಯನಿಗೆ ಕೈಗೆಟಕಲಾರದ ಸ್ಥಿತಿ ಇದೆ ಎಂದು ವಿಶ್ಲೇಷಿಸಿದ ಅವರು ಸಶಕ್ತ ಮತ್ತು ರಚನಾತ್ಮಕ ಸಮಾಜ ನಿರ್ಮಾಣದಲ್ಲಿ ಉಚ್ಚ ಶಿಕ್ಷಣದ ಪಾತ್ರ ಮಹತ್ತರವಾಗಿದ್ದು ಈ ದಿಶೆಯಲ್ಲಿ ಪ್ರಾಥಮಿಕದಿಂದ ಸ್ನಾತ್ತಕೋತ್ತರದವರೆಗೆ ಕಡ್ಡಾಯ ಉಚಿತ ಶಿಕ್ಷಣ ಎಲ್ಲರಿಗೂ ಲಭಿಸಬೇಕು ಎಂದರು.





*ರಾಜ್ಯಪಾಲ ವಜುಭಾಯಿ ರೂಢಾಭಾಯಿ ವಾಲಾ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವುದು(ಎಡ ಚಿತ್ರ). ವಿವಿಧ ಕ್ಷೇತ್ರದ ಸಾಧಕರಾದ ಗಿರೀಶ್ ರಾವ್ ಜೋಗಿ (ಸಾಹಿತ್ಯ), ಗುರುಕಿರಣ್ (ಸಂಗೀತ), ಮಮತಾ ಪೂಜಾರಿ (ಕ್ರೀಡೆ), ಪೂವಮ್ಮ ಅವರನ್ನು (ಅವರ ಅನುಪಸ್ಥಿತಿಯಲ್ಲಿ ತಾಯಿ ಜಾನಕಿಯವರನ್ನು) ರಾಜ್ಯಪಾಲರು ಸನ್ಮಾನಿಸಿದರು.*

ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡದೆ, ಕೇವಲ ಗಂಡುಮಕ್ಕಳನ್ನು ಬೆಳೆಸುವ ಪ್ರಯತ್ನ ಸಲ್ಲದು. ಸಮಾಜದಲ್ಲಿ ಹೆಣ್ಣಿಗೂ ಉತ್ತಮ ಸ್ಥಾನ ಕಲ್ಪಿಸುವ ನಿಟ್ಟಿನಲ್ಲಿ 'ಬೇಟಿ ಬಚಾವೋ, ಬೇಟಿ ಪಡಾವೋ, ಬೇಟಿ ಬಡಾವೋ ಆಂದೋಲನ' ಪ್ರಥಮ ಬಾರಿಗೆ ಗುಜರಾತ್‌ನಲ್ಲಿ ಜಾರಿಗೆ ತರಲಾಗಿದ್ದು, ಈಗ ಪ್ರಧಾನಿಯವರು ದೇಶದಲ್ಲೂ ಜಾರಿಗೆ ತಂದಿದ್ದಾರೆ ಎಂದರು.

ದೇಶದಲ್ಲಿ ರೈತರಾಗಲೀ ಸಣ್ಣಪುಟ್ಟ ಉದ್ಯೋಗ ಮಾಡುವವರಾಗಲೀ ಭ್ರಷ್ಟಾಚಾರ ಮಾಡುವುದಿಲ್ಲ. ಸುಶಿಕ್ಷಿತರು, ರಾಜ–ಕಾರಣಿಗಳು ಭ್ರಷ್ಟಾಚಾರ ಮಾಡುತ್ತಾರೆ. ಸಂಸ್ಕಾರಹೀನ ಶಿಕ್ಷಣ ವ್ಯರ್ಥ. ಸಾಕಷ್ಟು ಹಣ ಇದ್ದರೂ, ಸಂಸ್ಕಾರ ಇಲ್ಲದಿದ್ದರೆ ಅದು ಧೂಳಿಗೆ ಸಮ. ಭ್ರಷ್ಟಾಚಾರ ಮತ್ತು ಆತಂಕವಾದ ನಿಗ್ರಹಿಸಲು ಸಂಸ್ಕಾರಯುತ ಶಿಕ್ಷಣ ಅಗತ್ಯ ಎಂದರು.

ಸಂಸ್ಥಾಪನಾ ದಿನದ ವಿಶೇಷ ಉಪನ್ಯಾಸ ನೀಡಿದ ದಿ ಅಸೋಸಿಯೇಷನ್ ಆಫ್ ಅಕಾಡೆಮಿಕ್ಸ್ ಆ್ಯಂಡ್ ಸೊಸೈಟೀಸ್ ಆಫ್ ಸೈನ್ಸಸ್ ಇನ್ ಏಷ್ಯಾದ ಅಧ್ಯಕ್ಷ ಪ್ರೊ. ಕ್ರಿಷನ್ ಲಾಲ್ ಮಾತನಾಡಿ, 'ಶಿಕ್ಷಣ ಕ್ಷೇತ್ರದಲ್ಲಿ ಸಂಶೋಧನೆ, ಗುಣಮಟ್ಟಕ್ಕೆ ಹೆಚ್ಚಿನ ಒತ್ತು ನೀಡಬೇಕು. ಪ್ರಧಾನಿ ಕನಸಿನಂತೆ 'ಮೇಕ್ ಇನ್ ಇಂಡಿಯಾ'ಕ್ಕೆ ಹೆಚ್ಚಿನ ಆದ್ಯತೆ ನೀಡುವುದರಿಂದ ದೇಶ ಬಲಿಷ್ಟಗೊಳ್ಳಲು ಸಾಧ್ಯ. ಎಲ್ಲಾ ವಿಶ್ವವಿದ್ಯಾನಿಲಯಗಳು ನಿರಂತರ ಸವಾಲು ಸ್ವೀಕರಿಸುತ್ತಾ ಬಂದಿದ್ದು ಮಂಗಳೂರು ವಿವಿಯಿಂದ ರಾಜ್ಯ, ದೇಶಕ್ಕೆ ಅಪಾರ ಕೊಡುಗೆಯ ನಿರೀಕ್ಷೆಯಿದೆ ಎಂದರು. ಶಿಕ್ಷಣದಲ್ಲಿ ಪ್ರಯೋಗಗಳು, ಆವಿಷ್ಕಾರಗಳು ನಿರಂತರವಾಗಿ ನಡೆಯುತ್ತಿರಬೇಕು. ಶಿಕ್ಷಣ ವರ್ತಮಾನದ ಅವಶ್ಯಕತೆಗಳಿಗೆ ಪೂರಕವಾಗಿರಬೇಕು ಮತ್ತು ಭವಿಷ್ಯದ ದೃಷ್ಟಿಕೋನ ಹೊಂದಿರಬೇಕು ಎಂದರು.

ವಿವಿಯ ವಿಶ್ರಾಂತ ಕುಲಪತಿಗಳಾದ ಪ್ರೊ. ಎಂ. ಐ ಸವದತ್ತಿ, ಪ್ರೊ. ಬಿ ಶೇಕ್ ಆಲಿ, ಪ್ರೊ. ಹನುಮಯ್ಯ ಅವರನ್ನು ಸನ್ಮಾನಿಸಲಾಯಿತು.

ವಿವಿಧ ಕ್ಷೇತ್ರದ ಸಾಧಕರಾದ ಗಿರೀಶ್ ರಾವ್ ಜೋಗಿ (ಸಾಹಿತ್ಯ), ಗುರುಕಿರಣ್ (ಸಂಗೀತ), ಮಮತಾ ಪೂಜಾರಿ (ಕ್ರೀಡೆ), ಪೂವಮ್ಮ (ಅವರ ಅನುಪಸ್ಥಿತಿಯಲ್ಲಿ ತಾಯಿ ಜಾನಕಿಯವರನ್ನು) ರಾಜ್ಯಪಾಲರು ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಕೆ ಭೈರಪ್ಪ, ವಿಶ್ರಾಂತ ಕುಲಪತಿಗಳಾದ ಪ್ರೊ. ಶೇಕ್ ಆಲಿ, ಪ್ರೊ. ಎಂ. ಐ ಸವದತ್ತಿ, ಪ್ರೊ. ಹನುಮಯ್ಯ ಮತ್ತು ಕುಲಸಚಿವ ಪ್ರೊ. ಪಿ. ಎಸ್. ಯಡಪಡಿತ್ತಾಯ ಉಪಸ್ಥಿತರಿದ್ದರು.

## ತನಿಖಾ ಪತ್ರಿಕೋದ್ಯಮ ಎಂಬುದು ಉತ್ಸಾಹಿಗಳ ಸ್ವರ್ಗ: ವಿಜಯಲಕ್ಷ್ಮೀ ಶಿಬರೂರು




**ಮಂಗಳಗಂಗೋತ್ರಿ:** ತನಿಖಾ ಪತ್ರಕರ್ತರಾಗ ಬಯಸುವವರು ಸವಾಲುಗಳನ್ನು ಎದುರಿಸುವ ಮನೋಭಾವ ಹೊಂದಿರಬೇಕು. ತನಿಖಾ ವರದಿಗಾರಿಕೆಯಲ್ಲಿ ಅನೇಕ ಅಡೆ–ತಡೆಗಳು, ಬೆದರಿಕೆಗಳನ್ನು ಎದುರಿಸಬೇಕಾಗುತ್ತದೆ. ಅವುಗಳನ್ನು ಎದುರಿಸುವ ಸಾಮರ್ಥ್ಯವನ್ನು ಪತ್ರಿಕೋದ್ಯಮ ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದು ಸುವರ್ಣ 24x7 ಕನ್ನಡ ಸುದ್ದಿ ವಾಹಿನಿಯ ವಿಶೇಷ ತನಿಖಾ ವರದಿಗಾರ್ತಿ ವಿಜಯಲಕ್ಷ್ಮೀ ಶಿಬರೂರು ಕರೆನೀಡಿದರು.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದಲ್ಲಿ ಆಯೋಜಿಸಲಾಗಿದ್ದ 2015–16ನೇ ಸಾಲಿನ ಕಮ್ಯೂನಿಕೇಶನ್ ಕ್ಲಬ್ ಉದ್ಘಾಟಿಸಿ, "ತನಿಖಾ ಪತ್ರಿಕೋದ್ಯಮ" ಕುರಿತು ಮಾತನಾಡುತ್ತಿದ್ದರು.

ತನಿಖಾ ಪತ್ರಿಕೋದ್ಯಮ ಎಂಬುದು ಉತ್ಸಾಹಿಗಳ ಸ್ವರ್ಗ. ಅಲ್ಲಿ ಪ್ರತಿದಿನ ಹೊಸ ವಿಚಾರಗಳನ್ನು ತಿಳಿಯಬಹುದು. ನಿರ್ದಿಷ್ಟ ವಿಷಯಗಳ ಬಗ್ಗೆ ಆಳವಾದ ಅಧ್ಯಯನ ಮಾಡಿ ವರದಿಯನ್ನು ನೀಡುವ ಅವಕಾಶವಿದೆ. ಈ ಸಂದರ್ಭದಲ್ಲಿ ಪ್ರಭಾವಿಗಳ, ಹಣವಂತರ ಮತ್ತು ದುಷ್ಟರ ವಿರುದ್ಧ ತನಿಖೆ ಪ್ರಾರಂಭಿಸುವ ಹಂತದಲ್ಲಿ ಅನೇಕ ಅಡೆತಡೆಗಳನ್ನು ಎದುರಿಸಬೇಕಾಗುತ್ತದೆ. ಆ ಸವಾಲುಗಳನ್ನು ಎದುರಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ವಿದ್ಯಾರ್ಥಿ ಜೀವನದಲ್ಲಿಯೇ ರೂಪಿಸಿಕೊಳ್ಳಲು ಅವರು ಸಲಹೆ ನೀಡಿದರು.


*(3ನೇ ಪುಟಕ್ಕೆ)*


## ಶಿಕ್ಷಕರೇ ವಿದ್ಯಾರ್ಥಿಗಳಿಗೆ ಆದರ್ಶ: ಪ್ರೊ.ಖಿಂಚ

**ಮಂಗಳಗಂಗೋತ್ರಿ:** ಜ್ಞಾನ ಭಂಡಾರವನ್ನು ವಿದ್ಯಾರ್ಥಿಗಳಿಗೆ ಧಾರೆ ಎರೆದು ಅವರಲ್ಲಿ ಉತ್ತಮ ಮೌಲ್ಯಗಳನ್ನು ಬೆಳೆಸುವ ಜವಾಬ್ದಾರಿ ಶಿಕ್ಷಕರದ್ದು ಎಂದು ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಎಚ್.ಪಿ.ಖಿಂಚ ತಿಳಿಸಿದರು.



*ಶಿಕ್ಷಕರ ದಿನಾಚರಣೆಯ ಸಂದರ್ಭ ಪ್ರೊ.ಬಿ.ಎಂ ಹೆಗ್ಡೆ, ಮತ್ತು ಪ್ರೊ. ಎಂ.ಡಿ.ಮುತ್ತಮ್ಮ ಅವರನ್ನು ಸನ್ಮಾನಿಸಲಾಯಿತು.*

ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳಾ ಸಭಾಂಗಣದಲ್ಲಿ ಇತ್ತೀಚೆಗೆ ಆಯೋಜಿಸಲಾಗಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

'ಶಿಕ್ಷಕರು ವಿದ್ಯಾರ್ಥಿಗಳಿಗೆ ರೋಲ್‌ಮಾಡೆಲ್‌ಗಳಾಗಿದ್ದು, ತಮ್ಮಲ್ಲಿರುವ ಮಾಹಿತಿ, ಜ್ಞಾನವನ್ನು ವಿದ್ಯಾರ್ಥಿಗಳಿಗೆ ವರ್ಗಾಹಿಸುವ ಕಾರ್ಯ ನಿರ್ವಹಿಸುವವರಾಗಿದ್ದಾರೆ. ಮಾನವೀಯ ಸಂಬಂಧ ಬೆಸೆಯುವ ಯಾವುದೇ ಸವಾಲು, ಒತ್ತಡ ಎದುರಾದಾಗ ಅದನ್ನು ಸಮರ್ಥವಾಗಿ ನಿಭಾಯಿಸುವ ಹಾಗೂ ಮನದಲ್ಲಿ ಮೂಡುವ ಸಂಶಯಗಳಿಗೆ ತಾವೇ ಉತ್ತರ ಕಂಡುಕೊಳ್ಳುವ ಉತ್ತಮ ನಾಯಕತ್ವ ಗುಣ ವಿದ್ಯಾರ್ಥಿಗಳಲ್ಲಿ ಬೆಳೆಸುವ ಕಾರ್ಯ ಶಿಕ್ಷಕರದ್ದಾಗಿರುತ್ತದೆ' ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ವಿವಿ ಕುಲಪತಿ ಪ್ರೊ.ಕೆ ಭೈರಪ್ಪ ಉಳಿದೆಲ್ಲಾ ವೃತ್ತಿಗಳಿಗಿಂತ ಶಿಕ್ಷಕ ವೃತ್ತಿ ಶ್ರೇಷ್ಟವಾದುದು. ಶಿಕ್ಷಕನಾದವನಿಗೆ ನಿಷ್ಠೆ, ಶ್ರದ್ಧಾ ಮನೋಭಾವ, ಸೃಜನಶೀಲತೆ ಅತಿ ಅಗತ್ಯ. ಒಬ್ಬ ಸಾಮಾನ್ಯ ವ್ಯಕ್ತಿಯನ್ನು ಉತ್ತಮ ಶ್ರೇಣಿಗೆ ತರುವಲ್ಲಿ ಬೋಧಕರ ಪಾತ್ರ ಮಹತ್ತರವಾದುದು ಎಂದು ತಿಳಿಸಿದರು.

ಬೋಧನೆ ಹಾಗೂ ಸಂಶೋಧನಾ ಕೇತ್ರದಲ್ಲಿ ಸಾಧನೆ ಮಾಡಿದ ಪ್ರೊ. ಡಾ ಬಿ.ಎಂ ಹೆಗ್ಡೆ, ವಿಶ್ರಾಂತ ದೈಹಿಕ ಶಿಕ್ಷಣ ನಿರ್ದೇಶಕ ಮೇಜರ್ ಎನ್‌ವೆಂಕಟರಾಮಯ್ಯ ಮತ್ತು ಪ್ರೊ. ಎಂ.ಡಿ.ಮುತ್ತಮ್ಮ ಅವರನ್ನು ಸನ್ಮಾನಿಸಲಾಯಿತು. ಮೇಜರ್ ವೆಂಕಟರಾಮಯ್ಯ ಅವರ ಗೈರುಹಾಜರಿನಲ್ಲಿ ಅವರ ಸೋದರ ಸಂಬಂಧಿ ಎನ್.ಪಿ. ರಾಜಗೋಪಾಲನ್ ಪುರಸ್ಕಾರ ಸ್ವೀಕರಿಸಿದರು.

ಮಂಗಳೂರು ವಿವಿ ಕ್ಯಾಂಪಸ್‌ನ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಪ್ರೊ. ಬಾಲಕೃಷ್ಣ ಕಲ್ಲೂರಾಯ ಹಾಗೂ ವಾಣಿಜ್ಯ ವಿಭಾಗದ ಪ್ರೊ.ಪಿ. ಫಕೀರಪ್ಪ ಅವರಿಗೆ ವಾರ್ಷಿಕ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕುಲಸಚಿವ ಪ್ರೊ. ಕೆ. ಎಸ್ ಯಡಪಡಿತ್ತಾಯ, ಕುಲಸಚಿವ (ಪರೀಕ್ಷಾಂಗ) ಪ್ರೊ.ಬಿ. ನಾರಾಯಣ ಹಾಗೂ ಹಣಕಾಸು ಅಧಿಕಾರಿ ಪ್ರೋ ಪಿ.ಎ ರೇಗೋ ಹಾಜರಿದ್ದರು.

# ಸಂಪಾದಕೀಯ

## ರೈತರ ಒಡಲ ಉರಿ ಕಳಸಾ-ಬಂಡೂರಿ

ಉತ್ತರ ಕರ್ನಾಟಕದಲ್ಲಿ ಎರಡು ತಿಂಗಳಿನಿಂದ ಮಹದಾಯಿ ನದಿ ನೀರಿನ ಹಂಚಿಕೆ ಕುರಿತ ಹೋರಾಟ ನಡೆಯುತ್ತಿದೆ. ಗೋಕಾಕ್ ಚಳುವಳಿಯಂತೆ ಮಾಹಾದಾಯಿ ಹೋರಾಟಕ್ಕೆ ಕೂಡಾ ಕನ್ನಡ ಚಲನಚಿತ್ರರಂಗದ ಜೊತೆಗೆ ವಿವಿಧ ವಲಯಗಳ ನೈತಿಕ ಬೆಂಬಲವೂ ದೊರಕಿರುವುದು ಕಳಸಾ ಬಂಡೂರಿ ಹೋರಾಟಕ್ಕೆ ಬಲವನ್ನು ತಂದುಕೊಟ್ಟಿದೆ. ಒಂದೆಡೆ ಬರ; ಇನ್ನೊಂದೆಡೆ ರೈತರ ಆತ್ಮಹತ್ಯೆಯಂತಹ ಗಂಭೀರ ಸಮಸ್ಯೆಗಳ ಜೊತೆಗೆ ಮಹಾದಾಯಿ ಹೋರಾಟ ರಾಜ್ಯ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದ್ದಂತೂ ಸುಳ್ಳಲ್ಲ. ಅಂದಿನ ಮುಖ್ಯಮಂತ್ರಿ ಗುಂಡೂರಾವ್ ಸರ್ಕಾರ ಬೆಳಗಾವಿ ಜಿಲ್ಲೆಯ ಜಂಬೊಟ್ಟಿ ತಾಲೂಕಿನಲ್ಲಿ ಹುಟ್ಟಿ ಮಹಾರಾಷ್ಟ್ರ ಮತ್ತು ಗೋವಾದಲ್ಲಿ ಹರಿದು ಸಾಗರ ಸೇರುವ ಮಹಾದಾಯಿ ನದಿ ನೀರಿನ ಬಳಕೆಯ ಸಮಸ್ಯೆಗೆ ಸಂಬಂಧಿಸಿದಂತೆ ಎಸ್ ಆರ್ ಬೊಮ್ಮಾಯಿ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿತ್ತು. ವಿಶೇಷವೆಂದರೆ ಈ ಸಮಿತಿಯ ವರದಿಗೆ ಚಾಲನೆ ಸಿಕ್ಕಿದ್ದು ಎಸ್. ಆರ್ ಬೊಮ್ಮಾಯಿ ಮುಖ್ಯಮಂತ್ರಿಯಾದಾಗಲೇ. ಮಹಾದಾಯಿ ನದಿಯಿಂದ 45 ಟಿ.ಎಂ.ಸಿ ನೀರನ್ನು ಮಲಪ್ರಭೆಗೆ ಹರಿಸುವ ಈ ಯೋಜನೆ ರಾಜಕಾರಣಿಗಳ ದಿವ್ಯ ನಿರ್ಲಕ್ಷ್ಯದಿಂದಾಗಿ ಪರಿಣಾಮಕಾರಿ ರೀತಿಯಲ್ಲಿ ಜಾರಿಗೆ ಬರಲಿಲ್ಲ. ನೀರಿಗೆ ಬದಲಾಗಿ ಗೋವಾಕ್ಕೆ ಕಳಸಾ ಅಣೆಕಟ್ಟಿನ ವಿದ್ಯುತ್ ನೀಡುವ ಒಪ್ಪಂದ ಮಾಡಲಾಗಿತ್ತಾದರೂ ಗೋವಾ ಮುಖ್ಯಮಂತ್ರಿ ಮನೋಹರ್ ಪರಿಕ್ಕರ್ ಈ ಯೋಜನೆಗೆ ಅಪಸ್ವರ ಮೀಟಿದರು. ಮಹಾದಾಯಿ ನದಿ ನೀರು ಹಂಚಿಕೆ ವಿವಾದವನ್ನು ಕೇಂದ್ರ ಸರ್ಕಾರ 2009ರ ಡಿಸೆಂಬರ್ 10ರಂದು ನ್ಯಾಯಾಧಿಕರಣಕ್ಕೆ ವಹಿಸಿತು. ಕರ್ನಾಟಕ ಸರ್ಕಾರವು 45 ಟಿ.ಎಂ.ಸಿಯಿಂದ 27 ಟಿ.ಎಂ.ಸಿ ಕೇಳುವ ಪರಿಸ್ಥಿತಿಗೆ ಬಂತು. ಆ ಬೇಡಿಕೆ ಅಂದಿನ ಮುಖ್ಯಮಂತ್ರಿ ಎಸ್. ಎಂ ಕೃಷ್ಣ ಅವಧಿಯಲ್ಲಿ 9 ಟಿ.ಎಂ.ಸಿಗೆ ಇಳಿಯಿತು. ಆದರೆ 2013ರ ಆಗಸ್ಟ್ 21ರಂದು ಆದೇಶ ನೀಡಿದ ನ್ಯಾಯಾಧಿಕರಣ 7.56 ಟಿ.ಎಂ.ಸಿ ಬಳಕೆಗೆ ಒಪ್ಪಿಗೆ ನೀಡಿತು. ಆ ಸಂದರ್ಭದಲ್ಲಿ ಕುಮಾರಸ್ವಾಮಿ ಸರ್ಕಾರ ಯೋಜನೆಗೆ 100 ಕೋಟಿ ಬಿಡುಗಡೆ ಮಾಡಿತ್ತಾದರೂ ಸರಿಯಾದ ನಿರ್ವಹಣೆಯಿಲ್ಲದೆ ಯೋಜನೆ ಹಳ್ಳಹಿಡಿಯಿತು. ಆ ಸಂದರ್ಭದಲ್ಲೇ ವ್ಯವಸ್ಥಿತವಾಗಿ ಯೋಜನೆಯನ್ನು ಜಾರಿಗೊಳಿಸಲು ಪ್ರಯತ್ನಿಸಿದ್ದರೆ ಈಗಿನ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ. ಪ್ರಸ್ತುತ ಈ ಯೋಜನೆಯನ್ನು ಆಡಳಿತ ಪಕ್ಷದಿಂದ ಹಿಡಿದು ಪ್ರತಿಪಕ್ಷಗಳು ಕೂಡ ರಾಜಕೀಯಕ್ಕೆ ಬಳಸಿಕೊಳ್ಳಲು ಪ್ರಯತ್ನಿಸುತ್ತಿವೆ. ಇದರ ವಿರುದ್ಧ ಜನರು ಎಚ್ಚೆತ್ತುಕೊಳ್ಳಬೇಕಾಗಿದೆ. ರೈತ ಚೈತನ್ಯ ಯಾತ್ರೆಯ ಹೆಸರಿನಲ್ಲಿ ರಾಜಕಾರಣಿಗಳು ತಮ್ಮ ವರ್ಚಸ್ಸನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡುತ್ತಿರುವುದು ಕಣ್ಣಿಗೆ ಕಾಣುತ್ತಿರುವ ಸತ್ಯ. ಬಿ.ಜೆ.ಪಿ ಹಾಗು ಕಾಂಗ್ರೆಸ್‌ಗಳ ರಾಜಕೀಯ ಹಿತಾಸಕ್ತಿಗೆ ಬಲಿಯಾದ ಮಹಾದಾಯಿ ನದಿ ನೀರಿನ ಹಂಚಿಕೆ ವಿಚಾರವನ್ನು ಬಗೆಹರಿಸುವ ಹೊಣೆಗಾರಿಕೆ ಈ ಪಕ್ಷಗಳಿಗಿದೆ. ಕುಳಿತು ಮಾತನಾಡಿ ಪರಿಹರಿಸಬಹುದಾದ ಈ ಸಮಸ್ಯೆಯನ್ನು ರಾಜಕೀಯ ದುರುದ್ದೇಶದಿಂದ ಇನ್ನೂ ಬೆಳೆಸುವುದು ಸರಿಯಲ್ಲ. ಪ್ರತಿಭಟನೆ, ರಸ್ತೆತಡೆ, ಬಂದ್‌ಗಳಿಂದ ಜನರಿಗೆ ತೊಂದರೆಯೇ ಹೊರತು ಅದು ಸಮಸ್ಯೆಗಳಿಗೆ ಪರಿಹಾರವಲ್ಲ. ಆದರೆ ದಶಕಗಳಿಂದಲೂ ನೀರಿಗಾಗಿ ಹೋರಾಡಿದ ರೈತರಿಗೆ ಪ್ರತಿಭಟನೆಯ ಹಾದಿ ಹಿಡಿಯಬೇಕಾಗಿ ಬಂದದ್ದು ಅನಿವಾರ್ಯವೂ ಆಗಿದೆ. ಈಗ ಜನರು ಸಾಂತ್ವನದ ಮಾತುಗಳಿಗೆ ಖಂಡಿತ ಮಣಿಯುವುದಿಲ್ಲ. ಅವರಿಗೀಗ ಬೇಕಾಗಿರುವುದು 'ನೀರು'. ಅದನ್ನು ಒದಗಿಸುವಲ್ಲಿ ಸರ್ಕಾರ ಮತ್ತು ಪ್ರತಿಪಕ್ಷಗಳು ಪಕ್ಷಬೇಧ ಮರೆತು ಕೆಲಸ ಮಾಡಬೇಕಾಗಿದೆ. ಆದ್ದರಿಂದ ಮೂರೂ ರಾಜ್ಯಗಳ ಮುಖ್ಯಮಂತ್ರಿಗಳು ಚರ್ಚಿಸಿ ಸಾಧ್ಯವಾದಷ್ಟು ಬೇಗ ಸಮಸ್ಯೆಯನ್ನು ಬಗೆಹರಿಸಿ ರೈತರ ಹೋರಾಟಕ್ಕೆ ನ್ಯಾಯ ಸಲ್ಲಿಸಬೇಕಾಗಿದೆ. ಇದರಿಂದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಜನರ ನಂಬಿಕೆಯೂ ಬಲವಾಗುತ್ತದೆ.

# ಸಂಪಾದಕರಿಗೆ ಪತ್ರ

## ಕಸದ ತೊಟ್ಟಿ ಅಳವಡಿಸಿ

ಸ್ವಚ್ಛ ಭಾರತ ಅಭಿಯಾನದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯವೂ ಕೈ ಜೋಡಿಸಿರುವುದು ಸ್ವಾಗತಾರ್ಹ. ಅದರ ಮುಂದುವರಿದ ಭಾಗದಂತೆ ಮಂಗಳೂರು ವಿಶ್ವವಿದ್ಯಾನಿಲಯವು ಪ್ರತೀ ತಿಂಗಳ ಮೂರನೇ ಶುಕ್ರವಾರ ಕ್ಯಾಂಪಸ್ ಕ್ಲೀನಿಂಗ್ ಕಾರ್ಯಕ್ರಮವನ್ನು ನಡೆಸುತ್ತಿದೆ. ವಿದ್ಯಾರ್ಥಿಗಳ ಜೊತೆಗೆ ಅಧ್ಯಾಪಕರೂ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಳ್ಳುತ್ತಿರುವುದು ಸಂತೋಷದ ವಿಷಯ. ಎಲ್ಲಾ ವಿಭಾಗದಲ್ಲಿ ಕಸದ ಬುಟ್ಟಿಗಳನ್ನು ಅಳವಡಿಸಲಾಗಿದೆಯಾದರೂ ಕ್ಯಾಂಪಸ್‌ನ ಅನೇಕ ಜಾಗಗಳಲ್ಲಿ ಇನ್ನೂ ಹಲವು ಕಸದ ತೊಟ್ಟಿಗಳನ್ನು ಅಳವಡಿಸಬೇಕಾಗಿದೆ. ಸ್ಟೇಟ್ ಬ್ಯಾಂಕ್ ಎ.ಟಿ.ಎಂ, ಕ್ಯಾಂಟೀನ್ ಮುಂಭಾಗ ಮತ್ತಿತರ ಕಡೆಗಳಲ್ಲಿ ಕಸದ ತೊಟ್ಟಿಯ ಅವಶ್ಯಕತೆಯಿದೆ. ಅಧ್ಯಾಪಕರ ವಸತಿ ನಿಲಯಗಳ ಸಮೀಪ ಕಸ ರಾಶಿ ಬೀಳುತ್ತಿದ್ದು ಅದರ ನಿರ್ವಹಣೆಗೆ ಕ್ರಮ ಕೈಗೊಳ್ಳಬೇಕಾಗಿದೆ. ಸ್ವಚ್ಛತಾ ಕಾರ್ಯ ಯಶಸ್ವಿಯಾಗಬೇಕಾದರೆ ವಿದ್ಯಾರ್ಥಿಗಳ ಸಹಭಾಗಿತ್ವ ಅತೀ ಅಗತ್ಯ. ವಿದ್ಯಾರ್ಥಿಗಳಲ್ಲಿ ಸ್ವಚ್ಛತೆಯ ಕುರಿತಾಗಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಕಸವನ್ನು ತೊಟ್ಟಿಗಳಲ್ಲಿಯೇ ಹಾಕುವಂತೆ ನೋಡಿಕೊಳ್ಳಬೇಕು. ವಿಶ್ವವಿದ್ಯಾನಿಲಯ ಈ ಕುರಿತಾಗಿ ಕ್ರಮಕೈಗೊಂಡಾಗ ಸ್ವಚ್ಛತಾ ಕಾರ್ಯಕ್ರಮ ಯಶಸ್ವಿಯಾಗಬಹುದು.

ಹರೀಶ್ ಎ. ಎಂ

# ರಾಜಕೀಯ ಸ್ವಾರ್ಥಕ್ಕೆ ಬಲಿಯಾದ ನೇತ್ರಾವತಿ

ದಕ್ಷಿಣ ಕನ್ನಡದ ಜೀವ ನದಿ ನೇತ್ರಾವತಿ ಕಳೆದ ಮೂರು ವರ್ಷಗಳಿಂದ ಸುದ್ದಿಯಲ್ಲಿದೆ. ನೇತ್ರಾವತಿ ನದಿಗಾಗಿ ಹಲವಾರು ಪ್ರತಿಭಟನೆಗಳು ಜನಾಂದೋಲನಗಳು ನಡೆದಿವೆ ಮತ್ತು ನಡೆಯುತ್ತಾ ಇವೆ. ಸರ್ಕಾರ ಯೋಜಿಸಿರುವ ಎತ್ತಿನಹೊಳೆ ನೀರಾವರಿ ಯೋಜನೆ ಇದಕ್ಕೆ ಕಾರಣ. ಕುಡಿಯುವ ನೀರಿನ ತೀವ್ರ ಅಭಾವ ಎದುರಿಸುತ್ತಿರುವ ಕೋಲಾರ ಮತ್ತು ಚಿಕ್ಕಬಳ್ಳಾಪುರಗಳನ್ನು ಒಳಗೊಂಡಂತೆ ಒಟ್ಟು ಏಳು ಜಿಲ್ಲೆಗಳ 28 ತಾಲೂಕುಗಳ ಸುಮಾರು 68.5 ಲಕ್ಷ ಜನರಿಗೆ ಸುರಕ್ಷಿತ ಕುಡಿಯುವ ನೀರನ್ನು ಪೂರೈಸುವ ಉದ್ದೇಶದಿಂದ ಎತ್ತಿನಹೊಳೆ ಯೋಜನೆಯನ್ನು ಸರ್ಕಾರವು ಆರಂಭಿಸಿತು. ಪರಮಶಿವಯ್ಯನವರ ವರದಿಯಂತೆ ಈ ಯೋಜನೆಯನ್ನು ಸಿದ್ಧಪಡಿಸಲಾಗಿದೆ ಎಂದು ಹೇಳಲಾಗುತ್ತಿದೆಯಾದರೂ ಇಲ್ಲಿ ಪರಮಶಿವಯ್ಯನವರ ವರದಿಯನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಒಂದು ಮಾಹಿತಿಯ ಪ್ರಕಾರ ನೀರಿನ ಅಭಾವದಿಂದ ತತ್ತರಿಸುತ್ತಿರುವ ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಸಮರ್ಪಕವಾದ ನೀರಾವರಿ ವ್ಯವಸ್ಥೆಯನ್ನು ಮಾಡಬೇಕಾದರೆ ಒಟ್ಟು 180 ಟಿ.ಎಂ.ಸಿ ನೀರಿನ ಅಗತ್ಯವಿದೆ. ಆದರೆ ಎತ್ತಿನಹೊಳೆ ಯೋಜನೆಯ ಮೂಲಕ ಕೇವಲ 24 ಟಿ.ಎಂ.ಸಿ ನೀರನ್ನು ಮಾತ್ರ ತೆಗೆಯಲಾಗುತ್ತದೆ. ಇದಕ್ಕಾಗಿ ನೇತ್ರಾವತಿಯ ಉಪನದಿಗಳಾದ ಕೆರಿಹೊಳೆ, ಹೊಂಗಡ ಹಳ್ಳ, ಕಾಡುಮನೆ ಹೊಳೆ ಮತ್ತು ಎತ್ತಿನ ಹೊಳೆಯ ನೀರನ್ನು ಚಿಕ್ ಡ್ಯಾಂಗಳ ಮೂಲಕ ಸಂಗ್ರಹಿಸಿ, ಉತ್ತರ ಕರ್ನಾಟಕದ ಏಳು ಜಿಲ್ಲೆಗಳಿಗೆ ಹರಿಸಲಾಗುತ್ತದೆ. ಆದರೆ ಈ ಕೆಲಸಕ್ಕೆ ಸುಮಾರು 350 ಮೆಗಾವ್ಯಾಟ್‌ಗಿಂತಲೂ ಹೆಚ್ಚಿನ ವಿದ್ಯುತ್ ಅಗತ್ಯವಿದೆ. ಸಧ್ಯ ರಾಜ್ಯವೇ ವಿದ್ಯುತ್ ಅಭಾವದಿಂದ ಇರುವಾಗ ಈ ಯೋಜನೆಗೆ ಬೇಕಾಗುವ ವಿದ್ಯುತ್ ಎಲ್ಲಿಂದ ಬರುತ್ತದೆ ಎನ್ನುವುದು



ಪ್ರಶ್ನೆಯಾಗಿಯೇ ಉಳಿದಿದೆ. 12,912 ಕೋಟಿ ರೂಗಳ ಈ ಯೋಜನೆ ಪೂರ್ತಿಯಾಗುವ ಹೊತ್ತಿಗೆ ದುಪ್ಪಟ್ಟಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಶಾಶ್ವತ ಕುಡಿಯುವ ನೀರಿನ ಯೋಜನೆಯನ್ನು ಮಾಡಲು ಸಾಧ್ಯವಿಲ್ಲ ಎಂದಾದ ಮೇಲೆ ಸರ್ಕಾರದ ಬೊಕ್ಕಸವನ್ನು ಬರಿದು ಮಾಡುವ ಈ ಪ್ರಯತ್ನ ಯಾಕೆ?. ಸನ್ಮಾನ್ಯ ವೀರಪ್ಪ ಮೊೈಲಿಯವರು ಮತ ಹಾಕಿದ ಜನರ ಋಣ ತೀರಿಸುವುದಕ್ಕಾಗಿ ತನ್ನ ಊರಿನ ಜನರಿಗೆ ದ್ರೋಹ ಬಗೆಯುತ್ತಿದ್ದಾರೆ ಎಂಬುದು ದಕ್ಷಿಣ ಕನ್ನಡ ಜಿಲ್ಲೆಯ ಜನರ ಆರೋಪ. ಯೋಜನಾ ವರದಿಯು ತಿಳಿಸುವಂತೆ ನೇತ್ರಾವತಿಯಿಂದ 24 ಟಿ.ಎಂ.ಸಿ ನೀರನ್ನು ಬಳಸಲಾಗುತ್ತದೆಯಾದರೂ ವಾಸ್ತವದಲ್ಲಿ ನೇತ್ರಾವತಿ ನದಿ ಪ್ರದೇಶದಲ್ಲಿ ವಾರ್ಷಿಕ 3072 ಮಿ.ಮೀ ಮಳೆಯಾಗುತ್ತಿದ್ದು ಕೇವಲ 15.019 ಟಿ.ಎಂ.ಸಿಯಷ್ಟು ನೀರು ಮಾತ್ರ ಲಭ್ಯವಾಗುತ್ತಿದೆ. ಯೋಜನೆಯ ಪ್ರತೀ ಹಂತದಲ್ಲೂ ತಪ್ಪು ಮಾಹಿತಿಗಳನ್ನು ನೀಡುವ ಮೂಲಕ ಜನರ ದಾರಿತಪ್ಪಿಸುವ ಕೆಲಸ ನಡೆಯುತ್ತಿದೆ ಎನ್ನಲಾಗಿದೆ. ಕೆಲವು ವರ್ಷಗಳಿಂದ ಕರಾವಳಿ ಭಾಗದಲ್ಲಿ ಅತಿ ಕಡಿಮೆ ಮಳೆಯಾಗುತ್ತಿದ್ದು ಚಳಿಗಾಲ ಕಳೆಯುವ ಹೊತ್ತಿಗೆ ನೇತ್ರಾವತಿ ಬರಿದಾಗುತ್ತಿದೆ. ಇಂತಹ ಸಂಕಷ್ಟದ ಸಂದರ್ಭದಲ್ಲಿ ಸರ್ಕಾರ ನೇತ್ರಾವತಿಯ ಉಗಮ ಸ್ಥಾನಕ್ಕೇ ಕನ್ನ ಹಾಕುತ್ತಿರುವುದು ಸಹಜವಾಗಿಯೇ ದಕ್ಷಿಣ ಕನ್ನಡದ ಜನರನ್ನು ಸಿಡಿದೇಳುವಂತೆ ಮಾಡಿದೆ. ಅತ್ತ ಪಶ್ಚಿಮ ಘಟ್ಟದ ನಾಶ ಇತ್ತ ನೇತ್ರಾವತಿ ನದಿ ನೀರಿನ ಲೂಟಿ, ಇವೆರಡು ಜನರನ್ನು ಕಂಗೆಡಿಸಿದೆ. ಅಪೂರ್ಣ ಯೋಜನೆಯೊಂದನ್ನು ಮಾಡಿ ಜನರ ವಿರೋಧವನ್ನು ಕಟ್ಟಿಕೊಳ್ಳುವ ಬದಲಾಗಿ, ಸರ್ಕಾರ ಸಮಗ್ರ ಅಧ್ಯಯನವೊಂದನ್ನು ಕೈಗೊಂಡು ಶಾಶ್ವತ ನೀರಾವರಿ ಯೋಜನೆಯನ್ನು ಕೈಗೊಳ್ಳಬೇಕು. ಎಲ್ಲಕ್ಕಿಂತ ಮೊದಲಿಗೆ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿರುವ ಕೆರೆಗಳನ್ನು ಅಭಿವೃದ್ಧಿ ಮಾಡಬೇಕು. ಕೋಲಾರದಲ್ಲಿ ವಾರ್ಷಿಕ 710 ಮಿ.ಮೀ ಮಳೆಯಾಗುತ್ತಿದ್ದು ಅದನ್ನು ಸಮರ್ಥವಾಗಿ ಬಳಸಿಕೊಳ್ಳಬಹುದು. ನೀರಿನ ಕೊರತೆಯಿರುವ ನೇತ್ರಾವತಿಗೆ ಕನ್ನ ಹಾಕಿ ಜನರ ವಿರೋಧವನ್ನು ಎದುರಿಸುವ ಬದಲಿಗೆ, ಪರ್ಯಾಯ ಯೋಜನೆಯತ್ತ ಗಮನಹರಿಸಬೇಕಾಗಿದೆ.

ಧೀರಜ್

# ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ

ಇಂದು ಜಗತ್ತಿನಾದ್ಯಂತ ಪರಿಸರ ನಾಶವಾಗುತ್ತಿರುವ ಬಗ್ಗೆ ನಾವೆಲ್ಲಾ ಪತ್ರಿಕೆಗಳಲ್ಲಿ ಓದುತ್ತಿದೇವೆ. ಪರಿಸರವಾದಿಗಳು ಅದರ ವಿರುದ್ಧ ಧ್ವನಿ ಎತ್ತುತ್ತಲೇ ಇದ್ದಾರೆ. ಆದರೆ ಪರಿಸರದ ಬಗ್ಗೆ ಕಾಳಜಿ ಇಲ್ಲದ ಹಲವರು ಅರಣ್ಯ ಸಂಪತ್ತನ್ನು ಲೂಟಿ ಮಾಡುತ್ತಿದ್ದಾರೆ. ಈ ಕಾರಣದಿಂದಲೋ ಏನೋ ಕಳೆದ ಹಲವು ವರುಷಗಳಿಂದ ಭೂಮಿಯ ತಾಪಮಾನ ಏರುತ್ತಿದೆ. ಇದರಿಂದಾಗಿ ಹಲವು ಸೂಕ್ಷ್ಮ ಜೀವ ವೈವಿಧ್ಯಗಳು ಭೂಮಿಯ ಮೇಲೆ ಜೀವಿಸಲು ಸಾಧ್ಯವಾಗದೇ ಅಳಿದು ಹೋಗಿವೆ. ಇದೇ ಪ್ರಮಾಣದಲ್ಲಿ ಭೂ ತಾಪಮಾನದಲ್ಲಿ ಏರಿಕೆಯಾಗುತ್ತಾ ಹೋದರೆ ಇನ್ನೂ ಕೆಲವು ಜೀವಿಗಳು ಇತಿಹಾಸದ ಪುಟ ಸೇರಲಿವೆ.

ವಾನರ ರೂಪದಿಂದ ಮಾನವ ರೂಪಕ್ಕೆ ಮನುಷ್ಯ ಕುಲ ಪರಿವರ್ತನೆ ಹೊಂದಲು ತೆಗೆದುಕೊಂಡ ಅವಧಿ ಲಕ್ಷಾಂತರ ವರ್ಷಗಳಾದರೂ, ಅನಾಗರಿಕ ಸ್ಥಿತಿಯಿಂದ ಈಗಿನ ಸುಂದರ ನಾಗರಿಕ ಮಾನವನ ಸ್ಥಿತಿಗೆ ತನ್ನನ್ನು ಬೆಳೆಸಿಕೊಳ್ಳಲು ತೆಗೆದುಕೊಂಡ ಕಾಲ ಅತ್ಯಲ್ಪ. ಅಭಿವೃದ್ಧಿ, ನಗರೀಕರಣ, ಕೈಗಾರೀಕರಣದ ಹೆಸರಿನಲ್ಲಿ ಪರಿಸರ ಮಾಲಿನ್ಯವನ್ನು ಉಂಟು ಮಾಡುತ್ತಾ ಪರಿಸರ ನಾಶಕ್ಕೆ ದಾಪುಗಾಲು ಇಡುತ್ತಿದ್ದಾನೆ. ಮಾನವ ಪ್ರಕೃತಿಯ ಮೇಲೆ ತನ್ನ ಹಿಡಿತ ಸಾಧಿಸುವ ಪ್ರಯತ್ನಗಳನ್ನು ನಾವು ಬೆರಳಿನಲ್ಲಿ ಎಣಿಸಬಹುದಾದರೂ ಅದರಿಂದ ಆಗಿರುವ ಮತ್ತು ಆಗುತ್ತಿರುವ ಪರಿಣಾಮಗಳು ಮಾತ್ರ ಗಾಬರಿ ಹುಟ್ಟಿಸುವಂತದ್ದು.

ಮನುಷ್ಯನ ವಿನಾಶಕಾರಿ ಕೃತ್ಯಗಳಿಂದ ಘೋರ ಆಘಾತಕ್ಕೀಡಾದ ಪ್ರಕೃತಿ ಮಾತೆ ಸುಮ್ಮನಿದ್ದಾಳೆಯೇ? ಕ್ಷಮಯಾಧರಿತ್ರಿಯ ಸಹನೆಗೂ ಒಂದು ಮಿತಿ ಇದೆಯಲ್ಲವೇ? ಈಗ ಅವಳು ಮನುಷ್ಯನ ಕೃತಘ್ನ ಕೃತ್ಯಗಳ ವಿರುದ್ಧ ತಿರುಗಿ ಬಿದ್ದಿದ್ದಾಳೆ. ಪರಿಣಾಮವಾಗಿ ಅತಿವೃಷ್ಟಿ, ಅನಾವೃಷ್ಟಿ, ಭೂಕಂಪನಗಳು ಸಂಭವಿಸುತ್ತಿವೆ. ಅಲ್ಲದೇ ಮಾಲಿನ್ಯದಿಂದಾಗಿ ಭೀಕರ ರೋಗಗಳು ಹುಟ್ಟಿಕೊಂಡಿವೆ. ಭೂಮಿಯ ಮೇಲಿನ ಅಪಾರ ಜಲದಲ್ಲಿ ಕುಡಿಯಲು ಅರ್ಹವಾದ ಸ್ವಲ್ಪವೇ ಸ್ವಲ್ಪ ನೀರು, ಕಲುಷಿತಗೊಂಡು ಮಾನವನ ಬಳಕೆಗೆ ಅನರ್ಹವಾಗುತ್ತಿದೆ. ಇತ್ತೀಚೆಗೆ ಪರಿಸರದ ಅರಿವು ಮಾನವನಿಗಾಗುತ್ತಿದೆ. ಪರಿಸರವನ್ನು ಉಳಿಸುವುದಕ್ಕೆ ನಮ್ಮ ಸಮಾಜವು ಕಾನೂನಿನ ಮೊರೆ ಹೋಗುತ್ತಿದೆ. ಕಾಯಿದೆ ಕಾನೂನುಗಳು ಎಷ್ಟೇ ಬಂದರೂ ಅದನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರದೇ ಹೋದಲ್ಲಿ ಅದರಿಂದ ಯಾವುದೇ ಪ್ರಯೋಜನ ಆಗದು. ಎಲ್ಲದಕ್ಕಿಂತ ಹೆಚ್ಚಾಗಿ ಪರಿಸರದ ಮೇಲೆ ಪ್ರೀತಿಯಿಲ್ಲದೇ ಹೋದರೆ ಯಾವ ಕೆಲಸವೂ ಸಾರ್ಥಕವಾಗಲಾರದು.

ಇಂದು ನಾನಾ ಸಂಸ್ಥೆಗಳು ಸ್ವಚ್ಛ ಭಾರತ ಆಂದೋಲನ, ವನಮಹೋತ್ಸವಗಳನ್ನು ನಡೆಸುತ್ತಿವೆ. ದೇಶವನ್ನು ಮಾಲಿನ್ಯ ಮುಕ್ತವನ್ನಾಗಿಸಲು ಈ ಪ್ರಯತ್ನಗಳು ಚಾಲ್ತಿಯಲ್ಲಿದೆ. "ಈ ಭೂಮಿಗೆ ಮನುಷ್ಯನ ಅವಶ್ಯಕತೆಗಳನ್ನು ಪೂರೈಸುವ ಧಾರಣಾ ಶಕ್ತಿಯಿದೆ. ಆದರೆ ಆತನ ಲೋಭವನ್ನು ತಡೆದುಕೊಳ್ಳುವ ಶಕ್ತಿ ಅದಕ್ಕಿಲ್ಲ" ಎಂಬ ಮಹಾತ್ಮ ಗಾಂಧೀಜಿಯವರ ಮಾತನ್ನು ಅರಿತು ಅತಿಯಾಸೆಪಡದೆ ನಾವೆಲ್ಲರೂ ನಮ್ಮ ಪರಿಸರ ಸಂಪನ್ಮೂಲಗಳನ್ನು ಸಂರಕ್ಷಣೆ ಮಾಡಲು ಸಂಕಲ್ಪ ಮಾಡಬೇಕಾಗಿದೆ.

ಇಂದು ನಮ್ಮ ಮನೆಯಿಂದಲೇ ಈ ಕಾರ್ಯವನ್ನು ಪ್ರಾರಂಭಿಸಬೇಕಾಗಿದೆ. ಪ್ರಸ್ತುತ ಕೈಗಾರೀಕರಣ ಹಾಗು ನಗರೀಕರಣದಿಂದಾಗಿ ಸಂಪೂರ್ಣ ಮಾಲಿನ್ಯ ಮುಕ್ತವನ್ನಾಗಿ ಮಾಡಲು ಸಾಧ್ಯವಿಲ್ಲ. ಆದರೆ ಈ ಭೂಮಿ ನಾವು ನಮ್ಮ ಪೂರ್ವಜರಿಂದ ಪಡೆದ ಬಳುವಳಿಯಲ್ಲ. ಮಕ್ಕಳಿಂದ ಪಡೆದ ಸಾಲ ಎಂದು ತಿಳಿದು ನಮ್ಮ ಮುಂದಿನ ಪೀಳಿಗೆಗೂ ಪರಿಸರ ಸಮತೋಲನ ದಲ್ಲಿರುವಂತೆ ಕಾಪಾಡಿಕೊಳ್ಳ ಬೇಕಾಗಿರುವುದು ನಮ್ಮ ಕರ್ತವ್ಯವಾಗಿದೆ. ಆದ್ದರಿಂದ ಪರಿಸರವನ್ನು ಸಂರಕ್ಷಣೆ ಮಾಡುವ ಹೊಣೆ ನಮ್ಮೆಲ್ಲರ ಮೇಲಿದೆ. ಅದಕ್ಕಾಗಿ ನಾವೆಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡೋಣ.

ಸುಶ್ಮಿತಾ ಕೆ. ಎಂ

# ಸೊರಗುತ್ತಿರುವ ತುಳುನಾಡ ಪೊರ್ಲುದ ಆಟಿ

ಕಾರ್ತೆಲ್ ತಿಂಗಳು ಕಳೆದು ನಾವು ಕಾಲಿಡುವುದೇ ಆಟಿ ತಿಂಗಳಿಗೆ. ಸೌರಮಾನ ಪದ್ಧತಿಯ ನಾಲ್ಕನೇ ಮಾಸ ಆಟಿ ತಿಂಗಳು. ಶುಭ ಕಾರ್ಯಗಳು ಆಟಿ ಮಾಸದ ವೈರಿಗಳು. ಹೆಚ್ಚಿನ ರೋಗರುಜಿನಗಳು ಬಾಧಿಸುವ ತಿಂಗಳು ಇದೆಂದು ತುಳುಜನರ ನಂಬಿಕೆ. ಈ ತಿಂಗಳಲ್ಲಿ ಎಲ್ಲೆಲ್ಲೂ ಬಡತನ, ಕೂಡಿಟ್ಟ ಧಾನ್ಯಗಳೆಲ್ಲವು ಖಾಲಿಯಾಗಿ ಅಟ್ಟ ಗುಡಿಸುವ ಕಾಲ. ಯಾವುದೇ ಬೆಳೆಗಳನ್ನು ಬೆಳೆಯಲಾಗದ ಮಾಸವಿದು. ಗಂಡಸರು ನಾಟಿಯಿಲ್ಲದೆ ಮನೆಯಲ್ಲೇ ಇರುವಾಗ ಹೊಟ್ಟೆಯ ಹಸಿವಿಗಾಗಿ ಪ್ರಕೃತಿಯನ್ನು ಅರಸುವ ಸಮಯ. ಈ ಸಂದರ್ಭದಲ್ಲಿ ಮಾನವ ಮತ್ತು ಪ್ರಕೃತಿಯ ಅವಿನಾಭಾವ ಸಂಬಂಧ ಮನೆ ಮಾಡುತ್ತದೆ. ಹಸಿವಿನಿಂದಿರುವ ಮಕ್ಕಳಿಗೆ ತನ್ನೊಡಲ ಹಸಿರನ್ನು ನೀಡುವ ಭೂಮಿತಾಯಿ ಕರುಣಾಮಯಿ.

ಹೀಗೆ ತಾಯೊಡಲ ಎಲ್ಲೆಯಲ್ಲಿ ಪಸರಿಸಿರುವ ಕೆಸುವಿನ ಎಲೆಯನ್ನು ಸುರುಳಿಯಾಗಿ ಮಡಿಸಿ ಗಂಟು ಹಾಕಿ ಮಾಡುವ ಪದಾರ್ಥ ತೇಟ್ಲ, ಪತ್ರಡ್ಡೆ. ನುಗ್ಗೆ ಸೊಪ್ಪಿನ ಜೊತೆ ಮಳೆಗಾಲಕ್ಕೆ ಸಂಗ್ರಹಿಸಿಟ್ಟ ಹಲಸಿನ ಬೀಜ ಸೇರಿಸಿ ಪಲ್ಯ, ಬುದ್ಧಿ ಬೆಳವಣಿಗೆಗೆ ತಿಮರೆ ಚಟ್ನಿ, ತಜಂಕ್ ಪಲ್ಯ, ಕಿರಾತ ಕಡ್ಡಿ ಕಷಾಯ, ಮಾವಿನಕಾಯಿ ಗೊಜ್ಜು ಪಲ್ಯ, ಹಲಸಿನ ಸೊಳೆ(ಉಪ್ಪಡ್‌ಪಚ್ಚಿಲ್), ಉಪ್ಪಿನಕಾಯಿ, ಕಣಿಲೆ(ಎಳೆ ಬಿದಿರು) ಪಲ್ಯ. ವಿವಿಧ ಬಗೆಯ ಹಪ್ಪಳಗಳು, ಹುರಿದ ಹುಣಸೆ ಬೀಜ ಸಂಜೆ ಹೊತ್ತಿಗೆ ಮಳೆಗೆ ಬೆಚ್ಚನೆ ಮುದು ನೀಡುವ ಕುರುಕುರು ತಿನಿಸುಗಳು. ಮೆತ್ತೆಗಂಜಿ, ಒಲ್ಲೆಕೊಡಿ ಕಷಾಯಗಳು ತುಳುಜನರ ಹಸಿವಿಗಾಗುವ ಅಮೃತಗಳು. ಪಟ್ಟಿ ಮಾಡಿದರೆ ಮುಗಿಯದ ತಿನಿಸುಗಳ ಸಾಲುಗಳು.



ಆಟಿ ಅಮವಾಸ್ಯೆ ಎಂದರೆ ಹಾಲೆ ಮರದ ತೊಗಟೆಯ ಕಷಾಯ(ಪಾಲೆದ ಕೆತ್ತೆದ ಕಷಾಯ) ಎಂದೇ ಹೆಸರುವಾಸಿಯಾಗಿರುವ ರಥದ ಆಕಾರದಲ್ಲಿ ಗೆಲ್ಲುಗಳನ್ನು ಹರಡಿ, ಎತ್ತರಕ್ಕೆ ಬೆಳೆಯುವ ಹಾಲೆ ಮರದ ಹಾಲನ್ನು ಕುಡಿದು, ಬೆಲ್ಲ ಚಪ್ಪರಿಸುವ ಸಂಭ್ರಮ. ಕಡುಕಷ್ಟದ ತಿಂಗಳೆಂದೇ ಉಲ್ಲೇಖವಿರುವ ಆಟಿ ಮಾಸದಲ್ಲಿ ಅಮವಾಸ್ಯೆ ಹಿಂದಿನ ದಿನ ಸಂಜೆ ಮರಕ್ಕೆ ನೂಲು ಕಟ್ಟಿ ನಾಳೆ ಬರುತ್ತೇನೆ; ಮದ್ದು ಸಿದ್ಧ ಮಾಡಿ ಇಡು ಎಂದು ವನದೇವತೆಯನ್ನು ಪ್ರಾರ್ಥಿಸಿ ಬರುವ ಕ್ರಮವಿದೆ. ಮರುದಿನ ಸೂರ್ಯ ಹುಟ್ಟುವ ಮುನ್ನ ಗಂಡಸರು ಬೆತ್ತಲೆಯಾಗಿ ಹಾಲೆ ಮರದ ಬಳಿ ಹೋಗಿ, ಕಲ್ಲಿನಿಂದ ಹಾಲೆಯ ತೊಗಟೆಯನ್ನು ಜಜ್ಜಿಕೊಂಡು ಬರುವುದು. ತೆಗೆದ ರಸವನ್ನು ಕರಿಮೆಣಸು, ಜೀರಿಗೆ, ಓಮ, ಬೆಳ್ಳುಳ್ಳಿ ಜೊತೆ ಅರೆದು ಮಿಶ್ರಣ ಮಾಡಿ, ಬೊರ್ಗಲ್(ಬೆಣಚು ಕಲ್ಲು)ನ್ನು ಬಿಸಿ ಮಾಡಿ ಮಿಶ್ರಣಕ್ಕೆ ಮುಳುಗಿಸುತ್ತಾರೆ. ನಂತರ ಸಾಸಿವೆ ಒಗ್ಗರಣೆ ಕೊಟ್ಟು ಖಾಲಿ ಹೊಟ್ಟೆಗೆ ಮಕ್ಕಳಿಂದ ಹಿಡಿದು ಮುದುಕರ ವರೆಗೂ ಕಷಾಯವನ್ನು ಕುಡಿಯುತ್ತಾರೆ. ಬಾಯಿಯ ಕಹಿಗೆ ಬೆಲ್ಲ, ಉಷ್ಣಕ್ಕೆ, ದೇಹಕ್ಕೆ ತಂಪಾದ ಮೆತ್ತೆಗಂಜಿ ಸೇವಿಸುವುದು ವಾಡಿಕೆ. ಈ ಮರದಲ್ಲಿ ಆಟಿ ಅಮವಾಸ್ಯೆಯ ದಿನ ಸಾವಿರದ ಒಂದು ಬಗೆಯ ಔಷಧಿಗಳು ಸೇರಿಕೊಂಡಿರುತ್ತವೆ ಎಂಬ ನಂಬಿಕೆ ಇದೆ. ಇದರ ಹೂವಿನ ಪರಿಮಳ ಮತ್ತೇರಿಸುವಂತಹದ್ದು. ಮನುಷ್ಯ ಬಿಟ್ಟು ದುಂಬಿಗಳು ಕೂಡ ಮರದ ಬಳಿ ಸುಳಿಯುವುದಿಲ್ಲ. ಹಾಲೆ ಮರದ ತಾಯಿ ಬೇರು ಕಂಡವರಿಲ್ಲ ಎಂಬ ಮಾತು ಕೂಡ ತುಳುನಾಡಲ್ಲಿ ಚಾಲ್ತಿಯಲ್ಲಿದೆ.

ದುಡಿಮೆಗೆ ವಿರಾಮ ನೀಡಿರುವ ಈ ಸಮಯದಲ್ಲಿ ತುಳುಜನರು ಆಟಗಳ ಕಡೆಗೆ ಮನಹರಿಸುತ್ತಾರೆ. ಚೆನ್ನೆಮಣೆ, ಪೊಕ್ಕು, ಸರಿಮುಗುಳಿ, ಎದ್‌ರ್ ದೆಸೆ(ಒಬ್ಬರ ಒಗಟಿಗೆ ಇನ್ನೊಬ್ಬರು ಉತ್ತರಿಸುವುದು), ತೆಂಗಿನಕಾಯಿ ಆಟಗಳೆಲ್ಲವೂ ಮನಸ್ಸಿಗೆ ಮುದ ನೀಡುವಂತಹ ಆಟಗಳು. ಕತ್ತಲಾವರಿಸಿದಾಗ ಮನೆಮಂದಿಯೆಲ್ಲಾ ಸೇರಿಕೊಂಡು ಸಂತೋಷಕ್ಕಾಗಿ ತುಳುವ ದೈವಗಳ ಮತ್ತು ವೀರ ಪುರುಷರ ಚರಿತ್ರೆಯನ್ನು ಹೇಳುವ ಜನಪದ ಪಾಡ್ದನಗಳನ್ನು ಹಾಡುವ ಕಾಲವದು.

ಊರಿಗೆ ಹಿಡಿದಿರುವ ಕಾಯಿಲೆಗಳನ್ನು, ತೊಂದರೆಗಳನ್ನು ನಿವಾರಿಸುವವನೇ ಆಟಿ ಕೆಳೆಂಜ. ತುಳುನಾಡಿನ ತೆಂಕಣ–ಪೂರ್ವ ಪ್ರದೇಶದಲ್ಲಿ ದೈವ ನರ್ತಕರು(ಬಹುತೇಕ ನಲಿಕೆಯವರು) ಕುಣಿಯುವ ಜಾನಪದ ನೃತ್ಯ. ಊರು, ಮನೆಮನೆಗೆ ಸಂಚರಿಸಿ ಆಟಿ ಕೆಳೆಂಜ ಸಂದೇಶವನ್ನು ಸಾರುತ್ತಾರೆ. ಅರಶಿನ ಪುಡಿ ಮತ್ತು ಮಸಿಯನ್ನು ಮಂತ್ರಿಸಿ ಮನೆಗೆ ಬರುವ ಪೀಡೆ, ಇತ್ಯಾದಿ ದೋಷಗಳು ನಿವಾರಣೆಯಾಗಲೆಂದು ಸುತ್ತ ಎಸೆಯುತ್ತಾನೆ. ಹೀಗೆ ಕುಣಿಯುವ ನರ್ತಕರಿಗೆ ಜನರು ಅಕ್ಕಿ, ಭತ್ತ, ತರಕಾರಿ, ಹಣ ದಾನ ನೀಡುವುದು ವಾಡಿಕೆ.

ಆಟಿ ಅಮವಾಸ್ಯೆಯ ದಿನ ತೀರ್ಥ ಸ್ನಾನ ಮಾಡುವುದು ಕೂಡ ಪ್ರಸಿದ್ಧಿಯಾಗಿದೆ. ಆ ದಿನದಂದು ಎಲ್ಲಾ ಬಗೆಯ ತೀರ್ಥಗಳು ಘಟಿಕಾದಲ್ಲಿ ಸೇರಿರುತ್ತವೆ ಎಂಬುದು ಪ್ರತೀತಿ. ಕೊಡಿಪ್ಪಾಡಿ, ಕಾರಿಂಜಬೆಟ್ಟ, ನರಹರಿ ಪರ್ವತ, ಉಪ್ಪಿನಂಗಡಿಯಲ್ಲಿ ನೇತ್ರಾವತಿ ತೀರ್ಥ, ಸಮುದ್ರಸ್ನಾನ ಹಾಗು ಸೋಮೇಶ್ವರ, ಕೇರಳದ ಮುಜುಂಗಾವು, ಧರ್ಮಸ್ಥಳ ಮುಂತಾದೆಡೆಗಳಲ್ಲಿ ಆ ದಿನ ಪವಿತ್ರ ತೀರ್ಥ ಸ್ನಾನ ನಡೆಯುತ್ತದೆ.

ಆಟಿ ತಿಂಗಳ ಕೊನೆಯಲ್ಲಿ ಆಚರಿಸುವುದೇ ನಾಗರಪಂಚಮಿ. ಇಂದು ಇಂತಹ ಆಚರಣೆಗಳನ್ನೆಲ್ಲಾ ನಾವು ಹಳ್ಳಿ ಪ್ರದೇಶಗಳಲ್ಲೂ ಕಾಣುವುದು ಬಹಳ ಅಪರೂಪವಾಗಿದೆ. ಈ ಆಚರಣೆಗಳೆಲ್ಲವೂ ಇತಿಹಾಸದ ಪುಟಗಳಲ್ಲಿ ಅಕ್ಷರದ ರೂಪ ತಾಳುತ್ತಿವೆ.


ಮೇಘಲಕ್ಷ್ಮಿ ಮರುವಾಳ

# ಗೋವಿಂದ ಪೈ: ಕನ್ನಡದ ಮೊದಲ ರಾಷ್ಟ್ರಕವಿ

ಕನ್ನಡದ ಪ್ರಪ್ರಥಮ "ರಾಷ್ಟ್ರಕವಿ"ಗಳಾಗಿ ಪ್ರಸಿದ್ಧರಾದವರು ಹಾಗು ಮಂಜೇಶ್ವರಕ್ಕೆ ಭಾರತದ ಸಾಂಸ್ಕೃತಿಕ ಭೂಪಟದಲ್ಲಿ ಸ್ಥಾನ ಒದಗಿಸಿಕೊಟ್ಟವರು ಗೋವಿಂದ ಪೈ. ರಾಜ್ಯ ಪುನರ್‌ವಿಂಗಡಣೆಯಾದಾಗ 1956ರಲ್ಲಿ ಕಾಸರಗೋಡು ಕೇರಳದ ಪಾಲಾಯಿತು. ಆಗ ಅವರು ಬಹಳ ಹಳಹಳಿಸಿದರು. ಗೋವಿಂದ ಪೈಗಳು ಕೊನೆಯ ತನಕ ತಮ್ಮ ಹೆಸರಿನೊಂದಿಗೆ ಮಂಜೇಶ್ವರವನ್ನು ಜೊತೆಗೂಡಿಸಿ ಕೊಂಡಿದ್ದರು. ಅವರ ಪಾಲಿಗೆ ಕಾಸರಗೋಡು ಕರ್ನಾಟಕದ ಅವಿಭಾಜ್ಯ ಅಂಗವಾಗಿತ್ತು.

ಗೋವಿಂದ ಪೈಗಳು ಮೂಲತಃ ಮಂಗಳೂರಿನವರು. ತಂದೆ ಮಂಗಳೂರು ತಿಮ್ಮಪೈ ಮತ್ತು ತಾಯಿ ದೇವಕಿಯಮ್ಮ. ತಾಯಿಯ ತವರುಮನೆ ಮಂಜೇಶ್ವರ. ಅವರು ಕಾಸರಗೋಡು ತಾಲೂಕಿನ ಮಂಜೇಶ್ವರದ ಅಜ್ಜನ ಮನೆಯಲ್ಲಿ ಮಾರ್ಚ್ 23, 1883 ರಂದು ಜನಿಸಿದರು. ಅವರ ತಂದೆ ತುಂಬ ಸ್ಥಿತಿವಂತರು. ಆಗಿನ ಕಾಲಕ್ಕೆ ಸಾವಿರಾರು ರೂಪಾಯಿ ವಾರ್ಷಿಕ ತೆರಿಗೆ ಕಟ್ಟುತ್ತಿದ್ದವರು. ಗೋವಿಂದ ಪೈಗಳ ಪ್ರಾಥಮಿಕ ಶಿಕ್ಷಣ ಮಂಗಳೂರಿನಲ್ಲಿಯೇ ಆಯಿತು. ಅವರು ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ಇಂಟರ್‌ಮೀಡಿಯೆಟ್‌ನವರೆಗೆ ಶಿಕ್ಷಣ ಪಡೆದರು. ಖ್ಯಾತ ನವೋದಯ ಸಾಹಿತ್ಯದ ಆಚಾರ್ಯ ಪುರುಷರಾಗಿದ್ದ ಪಂಜೆ ಮಂಗೇಶರಾಯರು ಇವರಿಗೆ ಕನ್ನಡದ ಅಧ್ಯಾಪಕರಾಗಿದ್ದರು. ಗೋವಿಂದ ಪೈಗಳು ಹೆಚ್ಚಿನ ವ್ಯಾಸಂಗಕ್ಕಾಗಿ ಮದ್ರಾಸಿಗೆ ತೆರಳಿದರು. ನಂತರ ಮದ್ರಾಸಿನ ಕ್ರಿಶ್ಚಿಯನ್ ಕಾಲೇಜು ಸೇರಿದರು. ಅಲ್ಲಿ ಡಾ. ಎಸ್. ರಾಧಾಕೃಷ್ಣನ್ ಅವರು ಇವರ ಸಹಪಾಠಿಯಾಗಿದ್ದರು. ಬಿ.ಎ ತರಗತಿ ಕೊನೆಯ ವರ್ಷದ ಪರೀಕ್ಷೆ ನಡೆಯುವ ಸಂದರ್ಭದಲ್ಲಿ ತಂದೆಯ ಅನಾರೋಗ್ಯದ ಸುದ್ದಿ ತಿಳಿದು ತಮ್ಮ ವ್ಯಾಸಂಗವನ್ನು ಅಲ್ಲಿಗೇ ಪರಿಸಮಾಪ್ತಿ ಮಾಡಿದರು.

ತನ್ನ ತಂದೆಯ ಮರಣದ ನಂತರ ಗೋವಿಂದ ಪೈಗಳು ಪದವಿ ಪಡೆಯುವ ಗೋಜಿಗೆ ಹೋಗಲೇ ಇಲ್ಲ. ಬರೆದಿದ್ದ ಒಂದೇ ಪ್ರಶ್ನೆ ಪತ್ರಿಕೆ ಇಂಗ್ಲಿಷ್‌ನಲ್ಲಿ ಪ್ರಥಮ ಸ್ಥಾನ ಪಡೆದು ಬಂಗಾರದ ಪದಕ ಪಡೆದರು. ಅವರು ಹಾಜರಾಗಿದ್ದ ಪ್ರಥಮ ಭಾಷೆ ಇಂಗ್ಲಿಷ್‌ನಲ್ಲಿ ವಿಶ್ವವಿದ್ಯಾನಿಲಯದ ಸುವರ್ಣ ಪದಕ ಅವರಿಗೆ ದೊರೆಯಿತು. ಆದರೆ ಅವರ ಸಾಹಿತ್ಯದ ಅಧ್ಯಯನ ಜೀವನ ಪರ್ಯಂತ ನಿರಂತರವಾಗಿ ಮುಂದು ವರೆಯಿತು. ತಂದೆಯವರ ನಿಧನದ ನಂತರ ಹಿರಿಯ ಮಗನಾದ ಇವರ ಮೇಲೆ ಮನೆಯ ಎಲ್ಲಾ ಜವಾಬ್ದಾರಿ ಬಿತ್ತು. ಆ ಕಾರಣದಿಂದಾಗಿ ಅವರಿಗೆ ಬಿ.ಎ ಪದವಿ ಪೂರ್ಣಗೊಳಿಸಲಾಗಲಿಲ್ಲ. ಮನೆಯಲ್ಲಿಯೇ ಅಮೂಲ್ಯ ಗ್ರಂಥಗಳನ್ನು ತರಿಸಿ ಓದಿದರು. ಕಾಲೇಜಿನಲ್ಲಿದ್ದಾಗ ಲ್ಯಾಟಿನ್, ಫ್ರೆಂಚ್,



ಸಂಸ್ಕೃತ, ಪಾಲಿ, ಬಂಗಾಲಿ, ಭಾಷೆಗಳನ್ನು ಅಭ್ಯಸಿಸಿದ್ದ ಗೋವಿಂದ ಪೈಗಳು ಮನೆಯಲ್ಲಿ ಇನ್ನೂ ಹಲವು ಭಾಷೆಗಳನ್ನು ಅಭ್ಯಸಿಸಿ ಬಹುಭಾಷಾ ಪ್ರವೀಣರಾಗಿದ್ದರು. ಇವರ ಗ್ರಂಥಾಲಯದಲ್ಲಿ 43 ಭಾಷೆಗಳ ಸಾವಿರಾರು ಗ್ರಂಥ ಸಂಗ್ರಹವಿತ್ತು. ಇವರ ಮಾತೃಭಾಷೆ ಕೊಂಕಣಿ, ಪರಿಸರದ ಭಾಷೆ ತುಳು, ರಕ್ತಗತವಾದ ಭಾಷೆ ಕನ್ನಡ ಹಾಗು ಕಲಿತದ್ದು ಇಂಗ್ಲಿಷ್‌ನಲ್ಲಿ. ಗೋವಿಂದ ಪೈಯವರು ಮಂಜೇಶ್ವರದಲ್ಲಿ ನೆಲೆಸಿದ್ದರಿಂದ ಮಂಜೇಶ್ವರ ಗೋವಿಂದ ಪೈ ಎಂದೇ ಹೆಸರು ಗಳಿಸಿದರು.

ಪೈಗಳು 'ಗಿಳಿವಿಂಡು', 'ನಂದಾದೀಪ' ಎಂಬ ಕಾವ್ಯ ಸಂಕಲನಗಳನ್ನು ಹೊರ ತಂದಿದ್ದಾರೆ. 'ವೈಶಾಖೀ' ಹಾಗು 'ಗೊಲ್ಗೊಥಾ' ಎಂಬ ಎರಡು ಖಂಡಕಾವ್ಯಗಳನ್ನು ರಚಿಸಿದ್ದಾರೆ. 'ಹೆಬ್ಬೆರಳು' ಎನ್ನುವ ಪದ್ಯಗಳನ್ನು ಒಳಗೊಂಡ ಏಕಾಂಕ ನಾಟಕ ಹಾಗು 'ಚಿತ್ರಭಾನು' ಎಂಬ ಗದ್ಯನಾಟಕವನ್ನೂ ಬರೆದಿದ್ದಾರೆ. 'ತಾಯಿ' ಮತ್ತು 'ಕಾಯಾಯ್ ಕೊಮಾಜಿ' ಎಂಬ ಸಾಮಾಜಿಕ ನಾಟಕಗಳನ್ನು ರಚಿಸಿದರಲ್ಲದೆ ಜಪಾನಿನ "ನೋ" ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರ 'ಕನ್ನಡದ ಮೊರೆ' ಎಂಬ ಸಂಕಲನದಲ್ಲಿ ಹಲವಾರು ವ್ಯಕ್ತಿ ಚಿತ್ರಗಳು, ಆತ್ಮಕಥನಗಳು ಮತ್ತು ಭಾಷಣಗಳು ಅಡಕವಾಗಿವೆ. ಇವರಿಗೆ ಒದಗಿ ಬಂದ ಪ್ರಶಸ್ತಿ ಪುರಸ್ಕಾರಗಳು ಹಲವಾರು. ಮದರಾಸು ಸರ್ಕಾರವು 1949ರಲ್ಲಿ ಗೋವಿಂದ ಪೈಗಳಿಗೆ "ರಾಷ್ಟ್ರಕವಿ" ಎಂದು ಸನ್ಮಾನ ನೀಡಿ ಗೌರವಿಸಿತು. ಮುಂಬೈಯಲ್ಲಿ 1950ರಲ್ಲಿ ಜರುಗಿದ 34ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಗೋವಿಂದ ಪೈಗಳು ಅಧ್ಯಕ್ಷರಾಗಿದ್ದುದು ಅವರ ಹೆಗ್ಗಳಿಕೆಯಾಗಿತ್ತು.

ದಿವ್ಯಾ ಪಿ

ಮೊದಲ ಪುಟದಿಂದ

## ತನಿಖಾ ಪತ್ರಿಕೋದ್ಯಮ...

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಅಧ್ಯಕ್ಷ ಹಾಗೂ ಕಮ್ಯುನಿಕೇಶನ್ ಕ್ಲಬ್‌ನ ಅಧ್ಯಕ್ಷ ಪ್ರೊ.ಜಿ.ಪಿ. ಶಿವರಾಂ ಮಾತನಾಡಿ, ಸಾಮಾನ್ಯವಾಗಿ ಶಿಕ್ಷಣವೆಂಬುದು ಅಂಕ ಗಳಿಸುವಿಕೆ ಮತ್ತು ರ‍್ಯಾಂಕ್ ಪಡೆಯುವುದಕ್ಕೇ ಎಂದು ಭಾವಿಸಬಾರದು. ಆದರೆ ಮಾಧ್ಯಮ ರಂಗದಲ್ಲಿ ಏಕಾಗ್ರತೆ, ಆತ್ಮಸ್ಥೈರ್ಯ, ಸಾಮರ್ಥ್ಯ ಹಾಗು ಸ್ಪರ್ಧಾ ಮನೋಭಾವಗಳನ್ನು ರೂಢಿಸಿಕೊಂಡರೆ ಯಶಸ್ಸನ್ನು ಗಳಿಸಲು ಸಾಧ್ಯ. ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಪತ್ರಿಕೆ, ವಿದ್ಯುನ್ಮಾನ ಮಾಧ್ಯಮಗಳೇ ಕಲಿಕೆಯ ಸಾಧನಗಳು. ಪ್ರಾಮಾಣಿಕತೆ, ಸಿದ್ಧತೆ, ಹಾಗು ಬದ್ಧತೆ ಪತ್ರಕರ್ತನಿಗೆ ಅತ್ಯಗತ್ಯ ಎಂದು ತಿಳಿಸಿದರು.

ಸಮಾಜಕ್ಕೆ ಒಳಿತನ್ನು ಮಾಡಬೇಕೆಂಬ ಛಲ ಇದ್ದವರಿಗೆ ಪತ್ರಿಕೋದ್ಯಮವೆಂಬುದು ಫಲವತ್ತಾದ ಭೂಮಿ ಇದ್ದಂತೆ. ಇತ್ತೀಚಿನ ದಿನಗಳಲ್ಲಿ ತನಿಖಾ ಪತ್ರಿಕೋದ್ಯಮಕ್ಕೆ ಕಡಿಮೆ ಪ್ರೋತ್ಸಾಹ ಸಿಗುತ್ತಿದೆ. ಪ್ರಸ್ತುತ ದಿನಗಳಲ್ಲಿ ತನಿಖಾ ಪತ್ರಿಕೋದ್ಯಮದಂತಹ ಸವಾಲಿನ ಕೆಲಸವನ್ನು ಎದುರಿಸುವ ಪತ್ರಕರ್ತರ ಆಸಕ್ತಿ ಕುಂಠಿತವಾಗುತ್ತಿದೆ ಎಂದು ಅವರು ವಿಷಾದಿಸಿದರು.

# ಶಿಲೆಯೊಳಗಿಂದ ಕಲೆಯ ಕಾರಂಜಿ

ಒಬ್ಬ ತಾಯಿ ತನ್ನ ಮಗುವನ್ನು ಹೇಗೆ ಸಂರಕ್ಷಣೆ ಮಾಡುವಳೋ ಅದೇ ರೀತಿ ಭೂಮಿತಾಯಿ ತನ್ನೊಡಲಲ್ಲಿ ಇರುವ ಮುಗ್ಧ ಜೀವರಾಶಿಗಳನ್ನು ತನ್ನೊಳಗಿನ ಗರ್ಭದಲ್ಲಿಟ್ಟುಕೊಂಡು ಸಂರಕ್ಷಿಸುತ್ತಾಳೆ. ತಾಳ್ಮೆಯ ಭೂಮಿ ತಾಯಿಗೆ ಅವುಗಳು ಅಲಂಕಾರವೂ ಹೌದು. ಈ ವಿಶಾಲ ವಿಷಯವನ್ನು, ಭೂತಾಯಿಯ ಸಂರಕ್ಷಣೆಯ ಧೋರಣೆಯನ್ನು ಪಾತಾಳದೇವಿಯ ಕಲ್ಪನೆಯೊಂದಿಗೆ ಶಿಲ್ಪಕಲೆಯಲ್ಲಿ ಪ್ರತಿಬಿಂಬಿಸಿದವರು ಅಳಿಕೆಯ ಕೆ.ವಿ.ಸುರೇಶ್. ಪ್ರಸ್ತುತ ಅಳಿಕೆಯಲ್ಲಿ ಶ್ರೀ ಸತ್ಯಸಾಯಿ ವಿದ್ಯಾಸಂಸ್ಥೆಯ ಚಿತ್ರಕಲಾ ಶಿಕ್ಷಕನಾಗಿ ಕೆಲಸ ನಿರ್ವಹಿಸುತ್ತಿದ್ದು, ತಮ್ಮ ಶಿಲ್ಪಕಲಾ ಕೆತ್ತನೆಯ ಕೆಲಸವನ್ನೂ ಅಲ್ಲಿಯೇ ನಡೆಸುತ್ತಿದ್ದಾರೆ.



ಶಾಲೆಗೆ ಹೋಗುವ ಬದಲು ನಿಸರ್ಗದ ಸೌಂದರ್ಯಕ್ಕೆ ಮಾರುಹೋಗಿ ಗುಡ್ಡಗಾಡು ತಿರುಗಾಡುತ್ತಾ, ನದಿಗಳಲ್ಲಿ ಈಜಾಡುತ್ತಾ, ಪ್ರಕೃತಿ ಮಡಿಲಲ್ಲಿ ಕೂಸಾಗಿ ಆಟವಾಡುತ್ತಿದ್ದ ಮಗನ ಬಗ್ಗೆ ತಾಯಿಗೆ ತುಮುಲ. ಮಗನ ಭವಿಷ್ಯ ರೂಪಿಸಲು ತಾಯಿ ಸುರೇಶ್ ಅವರನ್ನು ಅಳಿಕೆ ಶ್ರೀ ಸತ್ಯಸಾಯಿ ಟ್ರಸ್ಟ್‌ನ ಆಶ್ರಯದಲ್ಲಿರುವ ಬಾಪೂಜಿ ಬಾಲನಿಕೇತನಕ್ಕೆ ಸೇರಿಸಿದ್ದರು. ಹಾಗಿದ್ದರೂ ಅವರು ವಿದ್ಯಾಭ್ಯಾಸಕ್ಕಿಂತ ಹವ್ಯಾಸದ ಕಡೆಗೇ ಹೆಚ್ಚು ಒಲವು ಬೀರುತ್ತಿದ್ದರು.

ಶಿಲ್ಪಕಲೆಯ ಬಗೆಗೆ ಯಾವುದೇ ಅರಿವು ಇಲ್ಲದ ಸುರೇಶ್ ಅವರಿಗೆ ಚಿತ್ರಕಲೆಯ ಮೇಲಿದ್ದ ಅಪಾರ ಆಸಕ್ತಿಯನ್ನು ಕಂಡು, ಶ್ರೀ ಸತ್ಯಸಾಯಿ ವಿದ್ಯಾಸಂಸ್ಥೆಯ ಅಧ್ಯಕ್ಷ ಯು. ಗಂಗಾಧರ ಭಟ್ ಉತ್ತಮ ಮಾರ್ಗದರ್ಶನ ನೀಡಿದರು. ಇವರ ಪ್ರೇರೇಪಣೆಯಿಂದ ಕಾರ್ಕಳದ ಶಿಲ್ಪಕಲಾ ಶಾಲೆಗೆ ಸೇರಿದರು. ಅಲ್ಲಿಯ ಗುರುಗಳಾದ ಕೆ. ಗುಣವಂತೇಶ್ವರ ಭಟ್‌ರಿಂದ ಶಿಲ್ಪಕಲೆಯನ್ನು ಮೈಗೂಡಿಸಿಕೊಂಡರು.

ಕೇರಳದ ಹಳ್ಳಿಯೊಂದರಲ್ಲಿ ಹುಟ್ಟಿ ಕೊಡಗಿನ ಸಿದ್ದಾಪುರದ ನೆಲ್ಯಮದಿಕೇರಿಯಲ್ಲಿ ಬೆಳೆದ ಕೆ.ವಿ.ಸುರೇಶ್ ಅವರದು ಶಿಲ್ಪಕಲೆಯಲ್ಲಿ ಸಾಧನೆ ಅಪಾರ. ಇವರ ಹಸ್ತಗಳ ಚಾತುರ್ಯದಲ್ಲಿ ಅರಳಿದ ಕಲಾಕೃತಿಗಳಲ್ಲಿ ಶಿಲಾಮೂರ್ತಿಗಳಾದ ಕಾಳಿಂಗ ಮರ್ದನ, ಮಹಾವೀರ, ಶಿವ, ನಂದಿ, ಸತ್ಯನಾರಾಯಣ, ಶಾರದೆ, ಕಾಳಿ, ಹನುಮಂತ ಮತ್ತು ರಾಮ ಸೇರಿವೆ. ನಾಗನ ಕಲ್ಲು, ದಾರುಶಿಲ್ಪಗಳಾದ ದರ್ಪಣ ಸುಂದರಿ, ಗಂಧರ್ವ ಕನ್ಯೆ, ಗರುಡ, ಪಲ್ಲಕ್ಕಿ, ಬೇಟೆಗಾರ್ತಿ ಇನ್ನೂ ಅನೇಕ ಕೆತ್ತನೆಗಳು ಇವರ ಕೈಯಿಂದ ಜೀವ ಪಡೆದುಕೊಂಡು ಕಲಾ ನೈಪುಣ್ಯಕ್ಕೆ ಸಾಕ್ಷಿಗಳಾಗಿವೆ.

ಪ್ರವೃತ್ತಿಯಾಗಿ ಆರಂಭಗೊಂಡ ಶಿಲ್ಪಕೆತ್ತನೆ ವೃತ್ತಿಯಾಗಿ ಪರಿವರ್ತನೆಗೊಂಡಿತು. ಪ್ರಾರಂಭದಲ್ಲಿ ಕರ್ನಾಟಕ, ಕೇರಳ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಪ್ರಸ್ತುತ ದುಬೈ, ಮಲೇಶಿಯಾ, ಅಮೇರಿಕ ಮತ್ತು ಇಂಗ್ಲೆಂಡ್‌ಗಳಿಂದಲೂ ಇವರ ಕೆತ್ತನೆಗಳಿಗೆ ಬೇಡಿಕೆಗಳು ಹರಿದು ಬಂದಿವೆ. ಚಿತ್ರಕಲೆಯ ಬಗೆಗೆ ರಾಜ್ಯಾದ್ಯಂತ ಅವರು ಹಲವು ಶಾಲೆಗಳಲ್ಲಿ ಶಿಬಿರಗಳನ್ನು ನೀಡಿದ್ದಾರೆ.

ಶಿಲ್ಪಕಲೆಗೂ ಚಿತ್ರಕಲೆಗೂ ತುಂಬಾ ವ್ಯತ್ಯಾಸವಿದೆ ಎನ್ನುವ ಇವರು ಎರಡನ್ನೂ ಸರಿದೂಗಿಸಿಕೊಂಡು, ಎರಡರಲ್ಲೂ ಚಾತುರ್ಯತೆಯನ್ನು ಗಳಿಸಿರುವರು. ಇಷ್ಟೇ ಅಲ್ಲದೇ ತಮ್ಮೊಳಗೆ ಹಲವಾರು ಕರಕುಶಲತೆಯನ್ನು ಪಳಗಿಸಿಕೊಂಡವರು ಸುರೇಶ್. ಬೆಂಗಳೂರಿನಲ್ಲಿ ಫೈಬರ್ ಮೌಲ್ಡಿಂಗ್, ತಮಿಳುನಾಡಿನಲ್ಲಿ ಸಿಮೆಂಟಿನ ಗೋಪುರ ಮತ್ತು ಮೂರ್ತ ರಚನೆಯನ್ನು, ಮುಂಬೈನಲ್ಲಿ ಪೂಜಾ ಮಂಟಪ ರಚನೆಗಳು ಕೆತ್ತನೆ, ಜೋಡನೆಯನ್ನು ಕಲಿತು, ಪುಟಪರ್ತಿಯಲ್ಲಿ ಅಪಾರ ಜನಸ್ತೋಮದ ನಡುವೆ ನಡೆಯುವ ವಿದ್ಯಾರ್ಥಿಗಳ ನಾಟಕಕ್ಕೆ ಏಳು ಅಡಿ ಎತ್ತರದ ವೆಂಕಟೇಶ್ವರ, 24 ಅಡಿ ಎತ್ತರದ ತಿರುಪತಿ ದೇವಸ್ಥಾನ, 36 ಅಡಿ ಎತ್ತರದ ನಟರಾಜ, ಕೃಷ್ಣ ಮತ್ತು ಸುಬ್ರಹ್ಮಣ್ಯನ ಮೂರ್ತಿಗಳನ್ನು ಥರ್ಮಕೋಲ್‌ನಲ್ಲಿ ತಯಾರಿಸಿದ ಕೈಚಳಕ ಇವರದು. ಇವುಗಳೊಂದಿಗೆ ಶ್ರೀಗಂಧದ ಕೆತ್ತನೆಯಲ್ಲಿ ವಿಶೇಷ ಪರಿಣತಿ ಇವರಿಗಿದೆ.

ತನ್ನ ಭವಿಷ್ಯಕ್ಕೆ ಉತ್ತೇಜನ ನೀಡಿದ ಶ್ರೀ ಸತ್ಯಸಾಯಿ ಸಂಸ್ಥೆಗೆ ಚಿರಋಣಿಯಾಗಿರುವ ಇವರು ಕೇವಲ ಒಂದು ವರ್ಷ ಮುಂಬೈಯ 'ಶ್ರೀ ಕಟೀಲು ಮಂಟಪ ವರ್ಕ್ಸ್' ಕಂಪೆನಿಯಲ್ಲಿ ಕೆಲಸ ಮಾಡಿದ್ದು ನಂತರದ ವೃತ್ತಿ ಜೀವನವನ್ನು ತಾವು ಕಲಿತ ಅದೇ ಶ್ರೀ ಸತ್ಯಸಾಯಿ ವಿದ್ಯಾಸಂಸ್ಥೆಯಲ್ಲಿ ಮುಂದುವರೆಸುತ್ತಿದ್ದಾರೆ.

ಇವರು ಹವ್ಯಾಸಿ ಛಾಯಾಚಿತ್ರಗಾರನಾಗಿದ್ದು, ಫೋಟೋಎಡಿಟಿಂಗ್ ಮತ್ತು ವಿಡಿಯೋ ಎಡಿಟಿಂಗ್ ಸಹ ಮಾಡುತ್ತಾರೆ. ಒಂದು ವರ್ಷಗಳ ಕಾಲ ಪತ್ರಿಕೆ ಹಾಗೂ ದೂರದರ್ಶನ ವರದಿಗಾರನಾಗಿ ಕೆಲಸ ನಿರ್ವಹಿಸಿದ್ದು, ಆಮಂತ್ರಣ ಪತ್ರಿಕೆ, ಮುಖಪುಟ ವಿನ್ಯಾಸವನ್ನೂ ಮಾಡುವ ಇವರ ಸೃಜನಶೀಲ ಕಲಾ ಕೊಡುಗೆ ಜನಮೆಚ್ಚಿಗೆ ಗಳಿಸಿದೆ .

ಮೇಘಲಕ್ಷ್ಮಿ ಮರುವಾಳ

# ವರ್ಷವಿಡೀ ಕ್ರೀಡಾದಿನ: ಡಾ. ಹೆಗ್ಡೆ



ಪ್ರೊ. ಬಿ. ಎಂ. ಹೆಗ್ಡೆ ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವುದು

**ಮಂಗಳಗಂಗೋತ್ರಿ:** ಕ್ರೀಡೆ ಎಂಬುದು ಕೇವಲ ದೈಹಿಕ ಸಾಮರ್ಥ್ಯ ಮತ್ತು ಸಧೃಢತೆಗೆ ಸಂಬಂಧಿಸಿದುದಲ್ಲ. ಕ್ರೀಡೆ ಎಂಬುದು ಬದುಕಿನಲ್ಲಿ ಕ್ರೀಡಾ ಮನೋಭಾವವನ್ನು ಬೆಳೆಸುವುದಾಗಿದೆ ಎಂದು ಮಣಿಪಾಲ ವಿಶ್ವದ್ಯಾನಿಲಯದ ವಿಶ್ರಾಂತ ಕುಲಪತಿ ಹಾಗೂ ಪದ್ಮ ವಿಭೂಷಣ ಪುರಸ್ಕೃತ ಪ್ರೊ.ಬಿ.ಎಂ ಹೆಗ್ಡೆ ತಿಳಿಸಿದರು.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳ ಸಭಾಂಗಣದಲ್ಲಿ ಇತ್ತೀಚೆಗೆ ದೈಹಿಕ ಶಿಕ್ಷಣ ವಿಭಾಗದ ಆಶ್ರಯದಲ್ಲಿ ಆಯೋಜಿಸಲಾಗಿದ್ದ 'ರಾಷ್ಟ್ರೀಯ ಕ್ರೀಡಾ ದಿನಾಚರಣೆ ಹಾಗೂ ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯ ಶಿಬಿರ' ಉದ್ಘಾಟಿಸಿ ಮಾತನಾಡುತ್ತಿದ್ದರು.

ಮನಸ್ಸಿನಲ್ಲಿ ನೆಮ್ಮದಿ, ಪ್ರೀತಿ ಹಾಗು ಸಂತೋಷವನ್ನು ಸದಾ ಕಾಯ್ದುಕೊಂಡರೆ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯ. ಮನದಲ್ಲಿ ಧೃಢವಾದ ನಂಬಿಕೆ ಇದ್ದರೆ ಶರೀರದಲ್ಲಿರುವ ಖಾಯಿಲೆಗಳು ವಾಸಿ ಮಾಡಲು ಸಾಧ್ಯ. ಮನಸ್ಸು ನಮ್ಮ ಹತೋಟಿಯಲ್ಲಿರದಿದ್ದರೆ ಯಾವುದೇ ಔಷಧಿ ತೆಗೆದುಕೊಂಡರೂ ಖಾಯಿಲೆ ವಾಸಿಯಾಗಲು ಸಾಧ್ಯವಿಲ್ಲ. ಆದ್ದರಿಂದ ಸಧೃಢತೆ ಎಂದರೆ ಕೇವಲ ಶರೀರಕ್ಕೆ ಮಾತ್ರ ಸೀಮಿತ ಎಂದು ತಿಳಿದುಕೊಳ್ಳಬಾರದು ಎಂದು ಅವರು ಹೇಳಿದರು.

ಇದೇ ಸಂದರ್ಭದಲ್ಲಿ ದೇಶದ ಹೆಸರಾಂತ ಆಟಗಾರನಾದ ಮೇಜರ್ ಧ್ಯಾನ್‌ಚಂದ್ ಅವರು ಕ್ರೀಡಾಕೇತ್ರಕ್ಕೆ ನೀಡಿದ ಅತ್ಯುತ್ತಮ ಕೊಡುಗೆಗಾಗಿ ಭಾರತ ರತ್ನ ಪ್ರಶಸ್ತಿ ಪಡೆದರು ಎಂದು ಅವರು ಧ್ಯಾನ್‌ಚಂದ್ ಸಾಧನೆಯನ್ನು ನೆನಪಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಂಗಳೂರು ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ಪಿ.ಎಸ್ ಯಡಪಡಿತ್ತಾಯ 'ಕ್ರೀಡೆಯು ನಮ್ಮಲ್ಲಿನ ಅಹಂ ಅನ್ನು ತೊಡೆದುಹಾಕಲು ಸಹಕಾರಿ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಮಂಗಳೂರು ವಿವಿಯ ದೈಹಿಕ ಶಿಕ್ಷಣ ನಿರ್ದೇಶಕ ಡಾ. ಸಿ.ಕೆ ಕಿಶೋರ್ ಕುಮಾರ್ ಸ್ವಾಗತಿಸಿದರು. ಕಾರ್ಯಕ್ರಮದ ಸಂಯೋಜಕ ಡಾ.ಕೇಶವ ಮೂರ್ತಿ ವಂದಿಸಿದರು.

# ಚಿತ್ರ ವಿಮರ್ಶೆ: "ನಾನು ಅವನಲ್ಲ ಅವಳು" ನಿಗೂಢ ಲೋಕದ ಅನಾವರಣ

ಮಂಗಳಮುಖಿ ಲಿವಿಂಗ್ ಸ್ಮೈಲ್ ವಿದ್ಯಾ ಅವರ ಆತ್ಮ ಕಥಾನಕ ಆಧಾರಿತ ಸಿನೆಮಾ ನಾನು ಅವನಲ್ಲ ಅವಳು. ಹಳ್ಳಿಯೊಂದರ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿರುವ ಮಾದೇಶ ಶಾಲೆಯಲ್ಲಿ ಹೆಣ್ಣಿಗ ಎಂದು ಅವಮಾನಕ್ಕೆ ಒಳಗಾಗುತ್ತಾನೆ. ಇತರ ಮಕ್ಕಳ ಹಾಸ್ಯಕ್ಕೆ ಗುರಿಯಾಗುತ್ತಿರುತ್ತಾನೆ. ಮಾದೇಶನಿಗೆ ಗಂಡು ಮಕ್ಕಳ ಜೊತೆ ಆಟವಾಡಲು ಇಷ್ಟವಿಲ್ಲ. ಬದಲಾಗಿ ಹೆಣ್ಣು ಮಕ್ಕಳಾಡುವ ಆಟಗಳೆಂದರೆ ಬಹು ಸೆಳೆತ. ಮನೆಯಲ್ಲಿ ಕೂಡ ಅಕ್ಕನ ಲಂಗ ಕುಪ್ಪುಸ ಆಭರಣ ಹಾಕಿ ಕನ್ನಡಿಯಲ್ಲಿ ನೋಡಿಕೊಳ್ಳುವುದೆಂದರೆ ಬಹು ಪ್ರೀತಿ. ಇದನ್ನು ಗಮನಿಸುವ ಅಕ್ಕನಿಗೆ ಖುಷಿ, ಆದರೆ ಅಮ್ಮನಿಗೆ ಆಶ್ಚರ್ಯ ಖುಷಿ ಮತ್ತು ಆತಂಕ. ಆದರೆ ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಯಾಗಿರುವ ಅಪ್ಪನಿಗೆ ಮಗನ ನಡವಳಿಕೆಗಳನ್ನು ಕಂಡರೆ ಕೋಪ. ಪ್ರತೀ ಬಾರಿಯೂ ಮಗನ ನಡತೆಯನ್ನು ಬದಲಾಯಿಸಿಕೊಳ್ಳುವಂತೆ ಉಪದೇಶ ನೀಡುವುದು ಶಿಕ್ಷಿಸುವುದು ಅಪ್ಪನ ರೀತಿ. ಗಂಡಾಗಿ ಹುಟ್ಟಿದವನು ಹೀಗೆಯೇ ಇರಬೇಕು, ಹೆಣ್ಣಾಗಿ ಹುಟ್ಟಿದವಳು ಹೀಗೆಯೇ ಇರಬೇಕು ಎಂದು ತಿಳಿವ ಪೂರ್ವಗ್ರಹ ಪೀಡಿತ ಸಮಾಜದಲ್ಲಿರುವ ಅಪ್ಪ, ಅಮ್ಮ, ತಂಗಿ ಮತ್ತು ಸುತ್ತಲಿನ ಸಮಾಜದ ವರ್ತನೆಯ ಬಗ್ಗೆ ಸಿನೆಮಾ ಚಿಂತನೆಗೆ ಹಚ್ಚುತ್ತದೆ. ಬಾಲ ಮಾದೇಶನ ಪಾತ್ರದಲ್ಲಿ ಪ್ರಫುಲ್ ವಿಶ್ವಕರ್ಮನ ನಟನೆ ಮನ ಮೋಹಕವಾಗಿದೆ.




ನಿರ್ದೇಶಕ : ಲಿಂಗದೇವರು
ನಿರ್ಮಾಪಕ :ರವಿ ಆರ್ ಗರಣಿ
ಛಾಯಾಗ್ರಹಣ : ಅಶೋಕ್ ವಿ ರಾಮನ್
ಸಂಗೀತ : ಅನೂಪ್ ಸೀಳಿನ್
ಸಂಕಲನ : ನಾಗೇಂದ್ರ
ಮೂಲಕಥೆ : ಲಿವಿಂಗ್ ಸ್ಮೈಲ್ ವಿದ್ಯಾ

ವ ಂ ತ ೊ ಬ್ಬ ಅಂತರ್ಲಿಂಗಿ ಸೆಂಥಿಲ್ ಪರಿಚಯದಿಂದ ಮಾದೇಶನಿಗೆ ಹೊಸ ಲೋಕದ ಪರಿಚಯವಾಗುತ್ತದೆ. ಈ ಹೊಸ ಲೋಕದಲ್ಲಿ ತನ್ನ ರೀತಿಯ ವರ್ತನೆಯ, ಪ್ರೀತಿಯ ಕಾಳಜಿಯ ಜನರ ಪರಿಚಯವಾಗಿ ಇಷ್ಟು ದಿನ ಅವಮಾನ ಎದುರಿಸಬೇಕಿದ್ದ ಲಿಂಗವನ್ನು ಬದಲಾಯಿಸಿಕೊಳ್ಳುವ ನಿರ್ಧಾರವನ್ನು ಮಾಡುತ್ತಾನೆ. ಅದು ಅವನನ್ನು ಪುಣೆಯ 'ನಾನಿ'ಯಲ್ಲಿಗೆ ಕರೆದೊಯ್ಯುತ್ತದೆ ಅಲ್ಲಿ ಅವನಿಗೆ ವಿದ್ಯಾ ಎಂದು ಮರು ನಾಮಕರಣವಾಗುತ್ತದೆ. ಸಿನೆಮಾದ ಗಟ್ಟಿತನ ಇರುವುದು ಕಥೆಯ ವಿಸ್ತೃತ ಕ್ಯಾನ್ವಾಸ್ ನಲ್ಲಿ. ತನ್ನ ಅದ್ಭುತ ನಟನಾ ಚಾತುರ್ಯದಿಂದ ಸಂಚಾರಿ ವಿಜಯ್ ಪ್ರೇಕ್ಷಕನ ಮನಸ್ಸನ್ನು ಹಿಡಿದಿಟ್ಟುಕೊಳ್ಳುತ್ತಾನೆ.

ಇಲ್ಲಿ ಅಪಹಾಸ್ಯವಿಲ್ಲ, ಅವಮಾನವಿಲ್ಲ ಮೈದಣಿಸಿ ದುಡಿಯುವ ಅಗತ್ಯವಿದ್ದರೂ ಪ್ರೀತಿಗೆ ಬರವಿಲ್ಲ. ಲಿಂಗ ಬದಲಾಯಿಸಿಕೊಳ್ಳಲು ನಿರ್ವಾಣ ಎಂಬ ಸಂಪ್ರದಾಯದ ಅಗತ್ಯವಿದೆ. ಅದಕ್ಕಾಗಿ ಭಿಕ್ಷೆಯಿಂದ ಸಂಪಾದನೆ ಮಾಡಬೇಕು. ನಿರ್ವಾಣ ಆದ ಮೇಲೆ ವೇಶ್ಯಾ ವೃತ್ತಿಯಲ್ಲಿ ತೊಡಗಬಹುದು. ಹೇಗೋ ನಾನಿಯ ಕರುಣೆಗೆ ಒಳಗಾಗಿ ನಿರ್ವಾಣ ಪಡೆಯುವ ವಿದ್ಯಾ ವಿದ್ಯಾವಂತೆಯಾಗಿರುವುದರಿಂದ ವೇಶ್ಯಾವೃತ್ತಿಗೆ ತೊಡಗಿಸಿಕೊಳ್ಳಲು ಮನಸ್ಸು ಒಪ್ಪುವುದಿಲ್ಲ. ಮತ್ತೆ ಭಿಕ್ಷೆ ಆಯ್ಕೆ ಮಾಡಿಕೊಂಡರೂ ಅಲ್ಲಿಯ ಅವಮಾನವನ್ನು ಸಹಿಸಿಕೊಳ್ಳಲಾಗುವುದಿಲ್ಲ. ಇಂತಹ ಸಂದಿಗ್ಧ ಸಮಯದಲ್ಲಿ ಊರಿಗೆ ಹಿಂತಿರುಗಿ ಕೆಲಸಕ್ಕೆ ತೊಡಗಿ ಹಣ ಹಿಂತಿರುಗಿಸುವುದಾಗಿ ನಾನಿಯನ್ನು ಒಪ್ಪಿಸಿ ಬೆಂಗಳೂರಿಗೆ ಹಿಂದಿರುಗುತ್ತಾಳೆ. ಈ ಭಾಗದಲ್ಲಿ ಮಂಗಳಮುಖಿಯರ ನಿಗೂಢ ಲೋಕವನ್ನು ಕಟ್ಟಿ ಕೊಡುವುದರಲ್ಲಿ ನಿರ್ದೇಶಕ ಲಿಂಗದೇವರು ಮತ್ತು ಛಾಯಾಗ್ರಾಹಕ ಅಶೋಕ್ ವಿ ರಾಮನ್‌ರ ದಕ್ಷತೆ ಎದ್ದು ಕಾಣುತ್ತದೆ.

ಮಂಗಳಮುಖಿಯರನ್ನು ಕಂಡರೆ ಮುಖ ತಿರುಗಿಸಿಕೊಳ್ಳುವ, ಅವರಿಗೆ ದುಡಿದು ತಿನ್ನಲೇನು ದಾಡಿಯೇ ಎಂದು ಕಿರುಚಿ ಅಬ್ಬರಿಸುವ ಆದರೆ ಅವರನ್ನು ಕೆಲಸ ಮಾಡಲು ಬಿಡಗೂಡದ, ಕೆಲಸ ನೀಡದ, ಸಮಾನತೆ ತೋರದ ಪೂರ್ವಗ್ರಹ ಪೀಡಿತ–ಆಷಾಡಭೂತಿ ಸಮಾಜದ ಟೀಕೆಯಷ್ಟೇ ಆಗದೆ, ಮಂಗಳಮುಖಿಯರ ಲೋಕದ ಆಗುಹೋಗುಗಳನ್ನು ಅವರ ಸಂಪ್ರದಾಯದ ರೀತಿ ರಿವಾಜುಗಳನ್ನು ಕಟ್ಟಿಕೊಡುವ ಈ ಸಿನೆಮಾ ಭಾರತೀಯ ಚಿತ್ರರಂಗದಲ್ಲಿ ತನ್ನದೇ ಆದ ಹೊಸ ಛಾಪನ್ನು ಮೂಡಿಸಿದೆ .

ಸೋಮಣ್ಣ

**ವಿದ್ಯಾರ್ಥಿ ಸಂಪಾದಕರು**

ಧೀರಜ್
ದಿವ್ಯ. ಪಿ
ಹರೀಶ್ ಎ. ಎಂ
ಮೇಘಲಕ್ಷ್ಮಿ ಮರುವಾಳ
ರೋಶನ್
ಸೋಮಣ್ಣ
ಸುಶ್ಮಿತಾ ಕೆ.ಎಂ

ಸಂಪಾದಕರು ಹಾಗು ಪ್ರಕಾಶಕರು: ಪ್ರೊ. ಜಿ.ಪಿ ಶಿವರಾಂ, ಅಧ್ಯಕ್ಷರು, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ–574199. ದ.ಕ
ಕಾರ್ಯಕಾರಿ ಸಂಪಾದಕರು: ಪ್ರೊ. ವಹೀದಾ ಸುಲ್ತಾನಾ.